# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru Tingalole Vol XXXII - 11 November 2014

PAGES 16




**ಅಸೋಸಿಯೇಶನ್‌ನಲ್ಲಿ ನಡೆದ ಮೈಸೂರು ಸಿಲ್ಕ್ ಸೀರೆಯ ಪ್ರದರ್ಶನ ಕಾರ್ಯಕ್ರಮದ ಉದ್ಘಾಟನೆ**

ಚಿತ್ರದಲ್ಲಿ ನಿಕೇಶಾ ಪಟೇಲ್, ಲೀಲಾ ಮಂಜುನಾಥ್, ಫಿಲೋಮಿನ್ ರಾಜು, ರೂಪಾ ಅಯ್ಯರ್ ಮತ್ತು ಕೆ. ಕಮಲಾ

**The Mysore Association, Bombay**

393, Bhau Daji Road, Matunga, Mumbai - 400 019.

Tel.: 2402 4647, 2403 7065 • Fax : 2401 0574

Email : mysoreassociation.mumbai@gmail.com

# Anubhaava Lahari

Smita Bellur, a trained Hindustani Classical Vocalist and Sufi Singer, with over 300 concerts to her credit,




presented "Anubhavaa Lahari" – a programme based on mystical verses of Sufis, Yogis, Dasas and Veerashaiva Pramatharu at the Mysore Association on Saturday, 18th October 2014.

She started her recital with Purandara Dasa's "Guruvina Olumeyu" in Raga Yaman. Explaining the importance of a GURU in Divine Pursuit of the Creator, she spoke of Meera's love for Krishna through "Kin Sang Khelu Holi" in Bhoop Rag.

Then she sang "Bettada Melondu Maneya MaDi" – a Akka Mahadevi Vachana. Kabir's "Pani me main Pyasi", Basavanna's "Suprabhata Samayadalli", Sufi Compositions "Root gaye more", Baba Bulle Shah's "Bulla kee Jaana Main Kaun", "Man Kunto Maula" followed next.

The versatile singer explored different ragas, genres, moods, taals and moved effortlessly in the 3 octaves. She gained applause and appreciation from the audience with each composition.

She explained that "Sufism is nothing but experiencing the connection with the Divine through a divine love for the Creator".

Her "Man Kunto Maula" and "Kodagana Koli nungitha" – by Shishunala Shareif were foot tapping.

The audience loved the recital. The accompanists Nissar Ahmed on Tabla, Vinod PADGE on Harmonium, Jayesh D on Octopad were brilliant.

# ಮೈಸೂರು ಅಸೋಸಿಯೇಶನ್‌ನಲ್ಲಿ ಮೈಸೂರು ಸಿಲ್ಕ್ ಸೀರೆಯ ಪ್ರದರ್ಶನ



ನವೆಂಬರ್ 4, 2014 ಮಂಗಳವಾರ ಸಂಜೆ ಅಸೋಸಿಯೇಶನ್ನಿನ ಸಭಾಗೃಹದಲ್ಲಿ ಕರ್ನಾಟಕ ಸಿಲ್ಕ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಆಯೋಜಿಸಿದ್ದ ಮೈಸೂರು ಸಿಲ್ಕ್ ಸೀರೆಗಳ ಭವ್ಯ ಪ್ರದರ್ಶನವಿತ್ತು.





ಇದಕ್ಕಾಗಿ ಬೆಂಗಳೂರಿನಿಂದ 8 ಹುಡುಗಿಯರು ಮತ್ತು 2 ಹುಡುಗರು ಪ್ರದರ್ಶನ ಕಾರರಾಗಿ ಬಂದಿದ್ದರು. ಇಂಡಿಯಾ ಕ್ಲಾಸಿಕ್ ಆರ್ಟ್ಸ್‌ನ

(ಪುಟ 15ಕ್ಕೆ)

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇದರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

# ನೇಸರು

## ತಿಂಗಳೋಲೆ

**ಸಂಪುಟ 31** | **ನವೆಂಬರ್ 2014** | **ಸಂಚಿಕೆ 11**

## ಸ್ವಚ್ಛ ಭಾರತ ಅಭಿಯಾನ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅಕ್ಟೋಬರ್ 2 ರಂದು ಆಚರಿಸುವ ಗಾಂಧಿ ಜಯಂತಿಯ ದಿನವನ್ನು 'ಸ್ವಚ್ಛ ಭಾರತ ಅಭಿಯಾನ'ದ ದಿನ ಎಂದು ಘೋಷಿಸಿರುವುದು ಶ್ಲಾಘನೀಯ ಸಂಗತಿ. ಸ್ವಚ್ಛತೆ ಕೇವಲ ಸರಕಾರದ ಕೆಲಸವಲ್ಲ. ಇದು ದೇಶದ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ಈ ಅಭಿಯಾನದಲ್ಲಿ ಜನರ ಸಹಭಾಗಿತ್ವವಿದ್ದಾಗ ಮಾತ್ರ ಸ್ವಚ್ಛ ಪರಿಸರ ನಿರ್ಮಾಣವಾಗಲು ಸಾಧ್ಯ. ನಾವೇ ನಮ್ಮ ದೇಶವನ್ನು ಸ್ವಚ್ಛವಾಗಿರಿಸದಿದ್ದರೆ ಮತ್ಯಾರು ಮಾಡುತ್ತಾರೆ. ನಮ್ಮ ಪರಿಸರ ನಾವು ಶುಚಿಯಾಗಿಟ್ಟುಕೊಂಡಲ್ಲಿ ನಮ್ಮ ಆರೋಗ್ಯ ವೃದ್ಧಿಯಾಗಲಿದೆ. ಇದರೊಂದಿಗೆ ಬಲಿಷ್ಠ ಆರೋಗ್ಯವಂತ ಭಾರತ ನಿರ್ಮಾಣವಾಗಬಹುದು.

ದೀಪಾವಳಿ ಹಬ್ಬ ಹತ್ತಿರ ಬರುತ್ತಿದ್ದಂತೆ, ಎಲ್ಲ ಮಹಿಳೆಯರು ಉತ್ಸುಕತೆಯಿಂದ ತಮ್ಮ ತಮ್ಮ ಮನೆಯನ್ನು ಸ್ವಚ್ಛಗೊಳಿಸುವುದರಲ್ಲಿ ವ್ಯಸ್ಥರಾಗುತ್ತಾರೆ. ದೀಪಾವಳಿ ಹಬ್ಬದಂದು ಲಕ್ಷ್ಮೀಯು ತನ್ನ ಭಕ್ತರ ಮನೆಗೆ ಸುಖ, ಶಾಂತಿ ಸಮೃದ್ಧಿಯನ್ನು ನೀಡಲು ಬರುತ್ತಾಳೆ ಎಂಬ ಪ್ರತೀತಿ ಇದೆ. ಅದಕ್ಕಾಗಿ ಮನೆಯ ಮೂಲೆ ಮೂಲೆಯನ್ನೂ ಬಿಡದೆ ಸ್ವಚ್ಛಗೊಳಿಸಿ, ಎಲ್ಲ ಕಡೆ ದೀಪ ಹೊತ್ತಿಸಿ, ಲಕ್ಷ್ಮೀಯನ್ನು ಸ್ವಾಗತಿಸಲಾಗುತ್ತದೆ. ಇಂತಹ ಒಂದು ಪರಂಪರೆಯನ್ನು ನಾವು ರೂಢಿಸಿಕೊಂಡು ಬಂದಿದ್ದೇವೆ. ವೈಜ್ಞಾನಿಕವಾಗಿ ನೋಡಿದರೆ, ದೀಪಾವಳಿ ಹಬ್ಬ ಮಳೆಗಾಲದ ನಂತರ ಬರುವುದರಿಂದ ಶೀತದ ಕಾರಣದಿಂದ ಮನೆಯಲ್ಲಿ ಫಂಗಸ್ ಮತ್ತು ಕೀಡೆಗಳು ಹುಟ್ಟಿಕೊಳ್ಳುತ್ತದೆ. ಹಾಗಾಗಿ ಮನೆಯನ್ನು ಸ್ವಚ್ಛಗೊಳಿಸುವುದು ಬಹು ಅಗತ್ಯ. ಹಾಗಿದ್ದರೆ, ಭಾರತದಲ್ಲಿ ಜಮವಾಗಿರುವ ಕಸವನ್ನು ನೋಡಿದರೆ ದೇವತೆಗಳು ದೂರ ದೂರಕ್ಕೂ ಕಾಣ ಸಿಗಲಾರರು ಅಂದ ಹಾಗೆ ಆಯಿತು. ಮನೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಕೇವಲ ಹೆಂಗಸರ ಕರ್ತವ್ಯವಲ್ಲ. ಮನೆಯನ್ನು ಸ್ವಚ್ಛವಾಗಿರಿಸುವುದು ಗಂಡ ಹೆಂಡತಿಯ ಇಬ್ಬರ ಜವಾಬ್ದಾರಿ. ಕೆಲಸದಾಕೆಯ ಮೇಲೆ ಈ ಜವಬ್ದಾರಿ ಬಿಟ್ಟು ಬಿಟ್ಟರೆ, ನಿಮ್ಮ ಕೈಯಾರೆ ಮನೆಯನ್ನು ಸ್ವಚ್ಛ ಮಾಡುವುದರಿಂದ ಸಿಗುವ ಆನಂದದಿಂದ ನೀವು ವಂಚಿತರಾಗುತ್ತೀರಿ.

ಮನೆಯನ್ನು ಸ್ವಚ್ಛವಾಗಿರಿಸಿಕೊಳ್ಳುವುದು ಮೊದಲ ಹಂತದ ಜವಬ್ದಾರಿ. ಇನ್ನು ಮನೆಯಿಂದ ಹೊರಗೆ ಬಂದು ನಮ್ಮ ಸಮಾಜದ ಕಡೆ ಒಂದಷ್ಟು ದೃಷ್ಟಿ ಹರಿಸಿ. ಮನೆಯನ್ನು ಸ್ವಚ್ಛವಾಗಿರಿಸಿಕೊಳ್ಳುವುದು ಹೇಗೆ ನಮ್ಮ ಜವಾಬ್ದಾರಿಯೋ ಹಾಗೆನೇ ದೇಶವನ್ನೂ ಸ್ವಚ್ಛವಾಗಿರಿಸಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ. ನೆಲದ ಮೇಲೆ ಬಿದ್ದಿರುವ ನೂರರ ನೋಟೊಂದನ್ನು ನೋಡಿ ಇದು ಯಾರದ್ದು ಎಂದು ಕೇಳಿದರೆ, ಎಲ್ಲರೂ ಇದು ನನ್ನದು, ನನ್ನದು ಎಂದು ಮುಂದೆ ಓಡಿ ಬರುತ್ತಾರೆ. ಅದೇ ನೋಟಿನ ಜಾಗದಲ್ಲಿ ಕಸ ಬಿದ್ದಿದ್ದರೆ ಇದು ಯಾರದ್ದು ಎಂದು ಕೇಳಿದರೆ, ಎಲ್ಲರೂ ತಮ್ಮದಲ್ಲ ಎಂದು ಉತ್ತರಿಸುತ್ತಾರೆ. ಯಾಕೆಂದರೆ ಈ ಕಸ ಎಲ್ಲರದ್ದು. ಯಾವುದೂ ಎಲ್ಲರದ್ದು ಆಗಿರುತ್ತದೋ ಅದು ಯಾರದ್ದೂ ಆಗಿರುವುದಿಲ್ಲ. ಇದರಿಂದ ಯಾರೂ ಈ ಕಸ ನನ್ನದು ಅಥವಾ ನನ್ನಿಂದ ಇಲ್ಲಿ ಬಿದ್ದಿದೆ ಅನ್ನೋದನ್ನು ಒಪ್ಪಿಕೊಳ್ಳೋದಿಲ್ಲ. ತಮ್ಮ ತಮ್ಮ ಮನೆಯನ್ನು ಬಹು ಪ್ರೀತಿಯಿಂದ ಸ್ವಚ್ಛ ಮಾಡುತ್ತಾರೆ, ಅದೇ ಸಮಾಜದ ಸ್ವಚ್ಛತೆಯ ಬಗ್ಗೆಯಾದರೆ, ಒಬ್ಬರು ಇನ್ನೊಬ್ಬರ ಮೇಲೆ ದೋಷಾರೋಪಣೆ ಮಾಡುವುದರಲ್ಲೆ ಸಮಯ ಕಳೆಯುತ್ತಾರೆ. ಎಷ್ಟೊಂದು ಸ್ವಾರ್ಥರಾಗಿ ಬಿಟ್ಟಿದ್ದೇವೆ ನಾವಿಂದು. ಸಮಾಜವನ್ನು ಸ್ವಚ್ಛ ಮಾಡುವುದರಲ್ಲಿ ಯಾವ ರೀತಿಯ ನಾಚಿಕೆ? ನಾಚಿಕೆ ಪಡಬೇಕು, ನಮ್ಮ ಸ್ವಾರ್ಥ ಬುದ್ಧಿಗೆ. ಕಸವನ್ನು ತೆಗೆದುಕೊಂಡು ಹೋಗುವವನು ಕಸದವನಲ್ಲ, ಕಸವನ್ನು ಎಲ್ಲೆಂದರಲ್ಲಿ ಬಿಸಾಡುವವನು ಕಸದವನು. ಗಾಂಧೀಜಿಯವರು ಒಂದು ಕಡೆ ಹೇಳುತ್ತಾರೆ 'ಜನರಿಂದ ಕೆಲಸವನ್ನು ಮಾಡಿಸುವ ಮೊದಲು ಆ ಕೆಲಸವನ್ನು ನೀವು ಸ್ವತಃ ಮಾಡಿ' ಎಂದು. ಯಾಕೆಂದರೆ ಯಾವ ಕೆಲಸ ನಮಗೆ ಮಾಡಲಿಕ್ಕೆ ಸಾಧ್ಯವಿಲ್ಲವೋ ಅದನ್ನು ಇನ್ನೊಬ್ಬರಿಂದ ಹೇಗೆ ಅಪೇಕ್ಷಿಸಲು ಸಾಧ್ಯ? ನಾವು ಸ್ವತಃ ಮಾಡೋದರಿಂದ ನಮ್ಮನ್ನು ನೋಡಿ ಇನ್ನೊಬ್ಬರು ಮುಂದೆ ಬರುತ್ತಾರೆ, ಹಾಗೆ ಅವರನ್ನು ನೋಡಿ ಮತ್ತೊಬ್ಬರು. ಹೀಗೆ ಒಗ್ಗಟ್ಟಿನಲ್ಲಿ ಸ್ವಚ್ಛತೆಯ ಕಾರ್ಯವನ್ನು ಮಾಡುವ ಪಣ ತೊಡಬೇಕು. ಹನಿ ಹನಿ ಸೇರಿ ಸಾಗರವಾಗುತ್ತದೆ, ವ್ಯಕ್ತಿ ವ್ಯಕ್ತಿ ಸೇರಿ ದೇಶವಾಗುತ್ತದೆ. ಈ ಸ್ವಚ್ಛ ಭಾರತ್ ಅಭಿಯಾನವನ್ನು ಸಾಕಾರಗೊಳಿಸೋಣ.

ನಮ್ಮ ಅಂತಃಕರಣದಲ್ಲಿರುವ ಕಸವನ್ನು ಮೊದಲು ಗುಡಿಸಿ ಶುದ್ಧೀಕರಿಸಿಕೊಳ್ಳಬೇಕು. ನೀವು ಒಮ್ಮೆ ಸಾರ್ವಜನಿಕ ಅಥವಾ ಸರಕಾರಿ ಒಡೆತನವಿರೋ ಸ್ಥಳದ ಕಡೆಗೆ ದೃಷ್ಟಿಹರಿಸಿ, ಹಾಗೇ ಖಾಸಗೀ ಒಡೆತನವಿರೋ ಸ್ಥಳದ ಕಡೆಗೆ ನೋಡಿ, ಯಾವುದು ಹೆಚ್ಚು ಸ್ವಚ್ಛವಾಗಿರುತ್ತದೆ ಅನ್ನೋದನ್ನು ಗಮನಿಸಿ. ನಮ್ಮ ಸಮಾಜದಲ್ಲಿ ಎಲ್ಲ ಕಡೆ ಕಸ ಹರಡಿಕೊಂಡಿದೆ. ಇದನ್ನು ಯಾರು ಸ್ವಚ್ಛಗೊಳಿಸುವುದು ಅನ್ನೋದು ಪ್ರಶ್ನೆ. ಯಾವತ್ತು ಈ ಜವಾಬ್ದಾರಿಯನ್ನು ಅರಿತು, ಇದನ್ನು ಸ್ವಚ್ಛಗೊಳಿಸುವು ನಮ್ಮ ಜವಾಬ್ದಾರಿ ಎಂದು ನಾವೆಲ್ಲ ಮುಂದೆ ಬರುತ್ತೇವೋ ಆವತ್ತು ಬಹುಷಃ ಈ ದೇಶದಲ್ಲಿ ಕಸವೇ ಇರಲಿಕ್ಕಿಲ್ಲ. ಸ್ವಚ್ಛತೆಯ ಕಾರ್ಯ ಅಷ್ಟೊಂದು ಸಮಸ್ಯೆದಾಯಕವಾಗಿರುವುದಿಲ್ಲ ನಮಗೆ.

ಸಾರ್ವಜನಿಕವಾಗಿ ಸ್ವಚ್ಛತೆ ಕಾರ್ಯ ನಡೆಯುವುದು ಒಂದೇ ಸಲ. ಆ ಊರಿಗೆ ಯಾವುದೋ ದೊಡ್ಡ ಮಂತ್ರಿ ಬರೋದಿದ್ದರೆ, ಆ ಊರನ್ನೆಲ್ಲ ಸಾರ್ವಜನಿಕವಾಗಿ ಸ್ವಚ್ಛಗೊಳಿಸಲಾಗುತ್ತದೆ. ಈಗ ಹಾಗಿಲ್ಲ, ಮೋದಿಯವರ ಘೋಷಣೆಗೆ ಪ್ರೇರಿತರಾಗಿ, ಎಲ್ಲ ಕಡೆ ಸ್ವಚ್ಛತೆ ಕಾರ್ಯ ಭರದಿಂದ ಸಾಗುತ್ತಿದೆ. ಇದು ಎಷ್ಟು ದಿನ ನಡೆಯುತ್ತದೋ ಗೊತ್ತಿಲ್ಲ. ಆದರೂ ಇದೊಂದು ಆಶಾದಾಯಕ ಬೆಳೆವಣಿಗೆ. ಮನೆಯಲ್ಲಿ ಹಿಡಿಸುಡಿ ಹಿಡಿದು ಗುಡಿಸಿ ಗೊತ್ತಿರದಿದ್ದವರು, ರಸ್ತೆಯನ್ನು ಸ್ವಚ್ಛಗೊಳಿಸುವುದಕ್ಕಾಗಿ ಕೈಯಲ್ಲಿ ಹಿಡಿಸುಡಿಯನ್ನು ಹಿಡಿದಿದ್ದಾರೆ. ಇದೊಂದು ಮಹತ್ತರವಾದ ಬೆಳವಣಿಗೆ ಎನ್ನಬಹುದು. ಕಸವನ್ನು ಎಲ್ಲೆಂದರಲ್ಲಿ ಚೆಲ್ಲುವವರನ್ನು ಹಿಡಿದು ದಂಡವನ್ನು ವಿಧಿಸಬೇಕು. ಅದನ್ನು ನೋಡಿದ ಇನ್ನೊಬ್ಬರು ಕಸವನ್ನು ಎಲ್ಲೆಂದರಲ್ಲಿ ಬಿಸಾಕುವಾಗ ಹತ್ತು ಸಲ ಯೋಚಿಸುತ್ತಾರೆ. ಆಗ ಸ್ವಲ್ಪಮಟ್ಟಿಗೆ ನಮ್ಮ ಸಮಾಜದ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬಹುದು. ನರೇಂದ್ರ ಮೋದಿಯವರು ಆಯೋಜಿಸಿದ ಈ ಅಭಿಯಾನ ಚಳುವಳಿಯ ರೂಪದಲ್ಲಿ ನಮ್ಮ ದೇಶದಲ್ಲಿ ನಿರಂತರವಾಗಿ ಮುಂದುವರಿಯಲಿ. 'ಸ್ವಚ್ಛ ಭಾರತ್ ಹಾಗೂ ಸುಖೀ ಭಾರತ್' ನಮ್ಮ ಜೀವನದ ಮೂಲಮಂತ್ರವಾಗಿಸೋಣವೇ?

ಡಾ. ಜ್ಯೋತಿ ಸತೀಶ್

# “ಸ್ವಕಾರ್ಯ”. . . .“ಸ್ವಾಮಿಕಾರ್ಯ”. . .

ಎಂಬ ಮಾತಿನಂತೆ ಪ್ರತಿ ವರ್ಷ ಗಣೇಶ, “ಗೌರಿ”ಯನ್ನು ಕಳುಹಿಸಿಕೊಟ್ಟ ನಂತರ, ಒಂದ್ಯೆದು ಆರು ದಿನಗಳು ಮೈಸೂರಿಗೆ ಹೋಗಿ ಬರುವ ಪರಿಪಾಠವನ್ನಿಟ್ಟುಕೊಂಡಿದ್ದೇವೆ. ‘ದಕ್ಷಿಣಕಾಶಿ’ ಎಂದು ಪ್ರಸಿದ್ಧಿಯಾಗಿರುವ ನಂಜನಗೂಡಿಗೆ ಹೋಗಿ ಶ್ರೀಕಂಠೇಶ್ವರನ ದರ್ಶನ ಮಾಡಿ ಬಂದೆವು. ಮೈಸೂರಿನ ಜನತೆಯನ್ನು ತನ್ನ ಪ್ರೇಮಪೂರ್ಣ ಕಟಾಕ್ಷದಿಂದ ಕಾಪಾಡುತ್ತಿರುವ ಮಾತೆ ಚಾಮುಂಡೇಶ್ವರಿಯನ್ನು ದರ್ಶನ ಮಾಡಿ, ನಮಿಸಿ ಬಂದೆವು. ಚಾರಿತ್ರಿಕ ಹಿನ್ನೆಲೆ ಹೊಂದಿರುವ ಶ್ರೀರಂಗಪಟ್ಟಣದಲ್ಲಿ ಶ್ರೀರಂಗನಾಥನ ದರ್ಶನ, ಕಾವೇರಿ ತೀರದಲ್ಲಿರುವ ಸುಂದರ ವಾತಾವರಣದಲ್ಲಿ ನೆಲೆಸಿರುವ ನಿಮಿಷಾಂಬ ದೇವಿಯನ್ನು ಕಂಡು ಬಂದೆವು (ಗಂಜಾಂ). ಈ ದೈವೀಕ ವಾತಾವರಣದಲ್ಲಿ ನಡೆದಾಡಿ ಬಂದುದರಿಂದ ಮನಸ್ಸು ಉಲ್ಲಾಸಗೊಂಡಿತು. ಧ್ಯಾನ, ಪೂಜೆ–ಪುರಸ್ಕಾರದಿಂದ ಶಾಂತಿ ಸಮಾಧಾನ ನಮ್ಮ ಪಾಲಿಗೆ ಲಭಿಸಿತು. ‘ಯಾತ್ರೆ’ ಸಾಂಗೋಪಾಂಗವಾಗಿ ನೆರವೇರಿತು. ಆತ್ಮ ತೃಪ್ತಿಯಾದ ನಂತರ, ಬಹಳ ಕಾಲದಿಂದ ಮೈಸೂರಿನಲ್ಲಿಯೇ ವಾಸವಾಗಿದ್ದ, ನಮ್ಮ ಪ್ರಿಯ ಸ್ನೇಹಿತರನ್ನು ಕಂಡೆವು. ಅವರೊಡನೆ ಕಷ್ಟ–ಸುಖ ಹಂಚಿಕೊಂಡೆವು. ಅವರ ಪ್ರಿಯ ನುಡಿಗಳು, ನೀಡಿದ ಸವಿಭೋಜನವನ್ನು ಉಂಡು ತೃಪ್ತಿಗೊಂಡೆವು.

‘ದಸರೆ’ ಹಬ್ಬ ಸಮೀಪಿಸುತ್ತಿತ್ತು. ‘ರಾಜ’ನಿಲ್ಲದ ನೋವು ಒಂದೆಡೆ ಜನತೆಯನ್ನು ಕಾಡಿಸುತ್ತಿದ್ದರೂ, “ಮೈಸೂರು ದಸರಾ” ಸಂಭ್ರಮದಲ್ಲಿ ಪಾಲುಗೊಳ್ಳಲೇಬೇಕೆಂಬ ಆಸೆ–ಆಕಾಂಕ್ಷೆಗಳನ್ನು ಹೊತ್ತ ಜನ ತಂಡ–ತಂಡವಾಗಿ ಬಸ್ ರೈಲು ನಿಲ್ದಾಣಗಳಲ್ಲಿ ಬಂದಿಳಿಯುತ್ತಿದ್ದರು. ನನ್ನ ಮನಸ್ಸಿನಲ್ಲೂ ಹಳೆಯ ‘ದಸರಾ’ ನೆನಪುಗಳು ಪ್ರವಾಹದ ರೀತಿ ಅಲೆ–ಅಲೆಯಾಗಿ ನುಗ್ಗಿ ಬಂದವು. ಮನಸ್ಸಿನ ಪರದೆಯ ಮೇಲೆ, ‘ನನ್ನ ಬಾಲ್ಯ’ದ ಚಿತ್ರಣಗಳು ಬೊಂಬೆಗಳೊಡನೆ ಆಡಿ ಕುಣಿದ ದೃಶ್ಯಗಳು ಮೂಡಿ ಬಂದವು. ಹಳೆಯ ಬೆಂಚುಗಳು, ಮೇಜುಗಳನ್ನು ಒರೆಸಿ, ಹೊಸ ಮಡಿಬಟ್ಟೆಯನ್ನು ಅದರ ಮೇಲೆ ಹಾಸಿ, “ಪಟ್ಟದ ಬೊಂಬೆಗಳು” (ಮರದ ಬೊಂಬೆಗಳು) ಮತ್ತಿತರ ಬೊಂಬೆಗಳನ್ನು ಜೋಡಿಸಿಟ್ಟ ಮೇಲೆ, ಪಕ್ಕದಲ್ಲಿ ಮಣ್ಣು ಹರಡಿ ಅದರ ಮೇಲೆ ‘ರಾಗಿ’ ಉದುರಿಸಿ ಒಂದಿಂಚು ‘ಹಸಿರು’ ಕಾಣಿಸಿಕೊಂಡ ಮೇಲೆ, ‘ಹೂದೋಟ’, ಮೃಗಾಲಯ, ಆಟದ ಮೈದಾನ ಮುಂತಾದ ಸೃಷ್ಟಿಕಾರ್ಯದಲ್ಲಿ ಮನೆಯಲ್ಲಿನ ಹಿರಿಯರು ಸಹಾಯ ಹಸ್ತ ನೀಡಿದರೆ, ಸಾಯಂಕಾಲದ ವೇಳೆ “ನಿಮ್ಮನೆಯಲ್ಲಿ ಬೊಂಬೆ ಇಟ್ಟಿದ್ದೀರಾ” ಅಂತ ಕೇಳ್ಕೊಂಡು ಬರುವ ಮಕ್ಕಳಿಗೆ “ಬೊಂಬೆಬಾಗಿನ” ಕೊಡಲು ಅಮ್ಮ, ಅಡಿಗೆಮನೆಯಲ್ಲಿ ಪುಟ್ಟ–ಪುಟ್ಟ ಕೋಡುಬಳೆಗಳು, ಚಕ್ಕುಲಿಗಳು, ಉಂಡೆಗಳನ್ನು ತಯಾರು ಮಾಡಿ ಡಬ್ಬಗಳಲ್ಲಿ ತುಂಬಿಡುವ ಕಾರ್ಯದಲ್ಲಿ ತೊಡಗಿರುತ್ತಿದ್ದರು. ಇಂದಿಗೂ ಆ ಪದ್ಧತಿಗಳೆಲ್ಲಾ ಇದೆಯೋ ಇಲ್ಲವೋ ಗೊತ್ತಿಲ್ಲ. ಕಾಲ ಓಡಿದೆ. ಈಗಿನ ಮಕ್ಕಳಿಗೆ ಪುರುಸೆತ್ತಿಲ್ಲಿದೆ? ರಜದಿನಗಳಲ್ಲಿ ಟ್ಯೂಶನ್, ಹೋಮ್‌ವರ್ಕ್ ಪಾಪ! ಈ ಸಣ್ಣ–ಸಣ್ಣ ಸಂಭ್ರಮಗಳಿಂದ ವಂಚಿತರಾಗಿರುವ ಇಂದಿನ ಮಕ್ಕಳನ್ನು ನೋಡಿದರೆ ‘ಅಯ್ಯೋ’ ಎನಿಸುತ್ತದೆ.

‘ಬೊಂಬೆಮನೆ’ಯ ಹತ್ತನೆಯ ವರ್ಷದ ಪ್ರದರ್ಶನ ಪ್ರಾರಂಭವಾಯಿತೆಂದು ಕೇಳಿದ್ದೇ ತಡ, ನೋಡಲೇ ಬೇಕೆಂದು ಹೊರಟುಬಿಟ್ಟೆನು. ನಾನು ‘ಮಗು’ವಾಗಿ ಬಿಟ್ಟೆನು! ಅಲ್ಲಿ ನಾನು ಕಳೆದ ಎರಡು ಗಂಟೆ ‘ಎರಡು’ ನಿಮಿಷದಂತೆ ಭಾಸವಾಯಿತು!

ಮೈಸೂರಿನ ನವರಾತ್ರಿ ಸಡಗರ, ಬೊಂಬೆ ಆರಾಧನೆಯ ಸುಸಮಯ, ಮಕ್ಕಳ ಕನಸುಗಳ ಬುತ್ತಿ, ಹಾಗೂ ದೊಡ್ಡವರ ನೆನಪುಗಳ ಸಂಗಾತಿ ಬೊಂಬೆಗಳು; ಮುದ್ದು ಬಿಂಬಗಳು, ಬೊಂಬೆಗಳು’ ಒಂದು ಪದ್ಧತಿ–ಪರಂಪರೆಯ ಪ್ರತೀಕಗಳು. ಇವುಗಳ ಉಳಿವು–ಬೆಳೆವುಗಳ ಅಧ್ಯಯನ, ಸಂಶೋಧನೆ, ಅವಲೋಕನ, ಪುರಸ್ಕಾರ (ಬೊಂಬೆಮನೆ). ಮಣ್ಣು, ಮರ, ಕಾಗದ, ಬಟ್ಟೆ, ಲೋಹಗಳಿಂದ ತಯಾರಾದ ಐದು ಸಾವಿರಕ್ಕೂ (5,000) ಹೆಚ್ಚಿನ ಬೊಂಬೆಗಳು ಹತ್ತು ಹಲವಾರು ರಾಜ್ಯಗಳಿಂದ ಬಂದು ಪ್ರದರ್ಶನದಲ್ಲಿ ಮುದ್ದು–ಮುದ್ದಾಗಿ ಕುಳಿತಿವೆ. ‘ರಾಮ್‌ಸನ್ಸ್ ಕಲಾಪ್ರತಿಷ್ಠಾನ’ ಹತ್ತು ವರ್ಷಗಳ ಹಿಂದೆ ಬೊಂಬೆಮನೆ ಪ್ರದರ್ಶನ ಪ್ರಾರಂಭಿಸಿದಾಗ ಇದ್ದ ಉದ್ದೇಶಗಳಲ್ಲಿ ಬಂದು – ಮೈಸೂರಿನ ಬೊಂಬೆ ಪ್ರಿಯರಿಗೆ, ಅವರಿಗೆ ಇಷ್ಟವಾದ ಬೇಕಾದಂತ ಬೊಂಬೆಗಳನ್ನು ಕಲಾವಿದರಿಂದ ಸೃಜಿಸಿಕೊಡುವುದು. ಈ ಬಾರಿಯ ವಿಶೇಷ ಆಕರ್ಷಣೆ, ಮುಮ್ಮಡಿ ಕೃಷ್ಣರಾಜ ಒಡೆಯರಿಂದ ವಿರಚಿತ ಶ್ರೀತತ್ವ ನಿಧಿಯ ‘ಶಕ್ತಿ ನಿಧಿ’ ದೇವಿ ಆರಾಧನೆಯ ಅಂಗಗಳಾದ ವಿವಿಧ ಯಂತ್ರ, ಧ್ಯಾನ ಶ್ಲೋಕಗಳ ದಿವ್ಯ ಭಂಡಾರ, ಇದರಲ್ಲಿರುವ ‘ಶೈವಾಗಮ’ ರೀತಿಯ ನವದುರ್ಗಾ ಧ್ಯಾನ ಶ್ಲೋಕ ಆಧರಿಸಿ ‘ಕಲಾಪ್ರತಿಷ್ಠಾನ’ದ ಕಲಾವಿದ ರವೀಶ್, ಬೊಂಬೆಗಳ ಮಾದರಿಯಲ್ಲಿ ರೇಖಾಚಿತ್ರ ರಚಿಸಿಕೊಟ್ಟರು. ಈ ಮೈಸೂರು ಸಾಂಪ್ರದಾಯಿಕ ಚಿತ್ರಶೈಲಿ ಆಧಾರಿತ ನವದುರ್ಗೆಯರ ಬೊಂಬೆಗಳು ಈ ಬಾರಿಯ ವಿಶೇಷ ಆಕರ್ಷಣೆ! ಮೈಸೂರು ಅರಮನೆ ಕರಿಕಲ್ಲು ತೊಟ್ಟಿಯಲ್ಲಿರುವ ಕೀರ್ತಿಶೇಷ್ಠ ಕಲಾವಿದ ವೈ. ಸುಬ್ರಹ್ಮಣ್ಯರಾಜು ಅವರ “ಶ್ರೀರಾಮನ ದುರ್ಗಾಪೂಜೆ” ಆಧಾರಿತ ಮಣ್ಣಿನ ಗೊಂಬೆಗಳು ವಿಶಿಷ್ಟವಾಗಿವೆ.

“ವಿಜಯದಶಮಿ” ಜಂಬೂ ಸವಾರಿ ಉತ್ಸವದಲ್ಲಿ ಬರುವ ಜೋಡಿ ಆಕಳು ಎಳೆವ ಬಂಗಾರದ ಪಲ್ಲಕ್ಕಿ ಕೀರ್ತಿಶೇಷ ಮಹಾರಾಜ ಶೀಕಂಠದತ್ತ ನರಸಿಂಹರಾಜ ಒಡೆಯರು ಬನ್ನಿ ಪೂಜೆಗಾಗಿ ಶ್ರೀ ಭುವನೇಶ್ವರಿ ದೇವಸ್ಥಾನಕ್ಕೆ ತೆರಳಲು ಬಳಸುತ್ತಿದ್ದ ಬೆಳ್ಳಿರಥ ಮತ್ತು ಮಹಾರಾಜರ ನಿಕಟ ದಾಯಾದಿಗಳು ಮುಂಚೆ ಕೂರುತ್ತಿದ್ದು ಈಗಿನ ಕರ್ನಾಟಕ ಪೋಲೀಸ್ ವಾದ್ಯಮೇಳದ ಸದಸ್ಯರು ಕೂರುವ ಆನೆಗಾಡಿ ಅಬ್ಬಾ! ವರ್ಣಿಸಲು ಸಾಧ್ಯವೇ ಇಲ್ಲ ಅಷ್ಟೊಂದು ಆಕರ್ಷಕವಾಗಿವೆ. ಜೊತೆಗೆ ಕುಂಭಕಲೆಯಲ್ಲಿ ಅಡುಗೆಮನೆ ಆಟದ ಸಾಮಾನುಗಳು, ಪೂಜಾ ಪರಿಕರಗಳು, ಅವುಗಳ ಮೇಲಿನ ರಂಗೋಲಿಯ ವಿನ್ಯಾಸ, ವಿವರಣೆಗಳಿಗೆ ನಿಲುಕಲಾಗದಷ್ಟು ಅಪ್ಯಾಯಮಾನವಾಗಿವೆ. ಗ್ರಾಮೀಣ ಪ್ರದೇಶಗಳಲ್ಲಿ ಬೊಂಬೆಯಂತಹ ಒಂದು ಮುದ್ದಾದ ಬಿಂಬವನ್ನು ಕುಕ್ಕೇ (ಬುಟ್ಟಿ) ಸಂಪುಟ ಅಥವಾ ತಲೆಮೇಲಿನ ಕಪಾಟಿನಲ್ಲಿಟ್ಟು ಮನೆ–ಮನೆ ತಿರುಗುವ ಆಚರಣೆ, ‘ಬೊಂಬೆ ಆರಾಧನೆ’ಯದೇ ಮುಂದುವರಿದ ಗ್ರಾಮ್ಯ (ದೇಸಿ) ಸಂಪ್ರದಾಯಗಳನ್ನು ಗೌರವಿಸಲೋಸುಗ ಸಿದ್ಧಗೊಂಡಿದೆ. “ಜಂಗಮ ಗುಡಿ” ಭಾರತದ ಸಂಪದ್ಭಾರಿತ ನೃತ್ಯ ಸಂಪ್ರದಾಯಗಳ ವಿವಿಧ ನೃತ್ಯ ಭಂಗಿಗಳ ಸುಂದರ ಅರಿವೆ ಬೊಂಬೆಗಳು ಈ ಬೊಂಬೆ ಮನೆಯ ಮತ್ತೊಂದು ವಿಶೇಷ.

✍ ವನಜರಾಜನ್, ಬೆಂಗಳೂರು

***

## ಕೆಲವು ಅಂಕಿ /ಅಕ್ಷರ ನಿಮಗೆ ‘ಆಗಿ’ ಬರುತ್ತದೆಯೇ?

‘ಬರುತ್ತದೆ ಅಥವಾ ಬರುವುದಿಲ್ಲ’ ಅಂದರೆ ನೀವು ನಂಬ್ತೀರಾ? ಛೇ! “ಇವೆಲ್ಲಾ ಮೂಢ ನಂಬಿಕೆಗಳು” ಎಂದು ಮೂಗೆಳೆದು ಮೂಲೆಗೆ ತಳ್ಳುತ್ತೀರಾ? ನಿಜ ಹೇಳಬೇಕೆಂದರೆ ನಾನೂ ಸಹ ಈ ಮೊದಲು ನಂಬುತ್ತಿರಲಿಲ್ಲ. ಅಂಕಿಯೊಂದು ಆಪತ್ತುಗಳನ್ನು ಸಹ ಆಹ್ವಾನಿಸಬಲ್ಲದು ಎಂಬ ಅರಿವೇ ಇರಲಿಲ್ಲ. ನಿಮಗೂ ತಿಳಿದಿರಬಹುದು. ಕೆಲವರು ತಮ್ಮ ಹೆಸರಿನಲ್ಲಿನ ಅಕ್ಷರಗಳನ್ನು ಎಣಿಕೆ ಮಾಡಿ ‘ಅದೃಷ್ಟ’ ಕ್ಕೆ “ಆಮಂತ್ರಣ” ವನ್ನು ನೀಡಬಹುದಾದ ಸುಲಭೋಪಾಯವೆಂದು ಭಾವಿಸಿ ಒಂದು ಅಥವಾ ಎರಡು ಅಕ್ಷರಗಳನ್ನು ಹೊಸದಾಗಿ ಸೇರಿಸಿಕೊಳ್ಳುತ್ತಾರೆ. ಮತ್ತೆ ಹಲವರು ತಮ್ಮ ತಂದೆ–ತಾಯಿ ಶಾಸ್ತ್ರೋಕ್ತವಾಗಿ ನಾಮಕರಣ ಮಹೋತ್ಸವವನ್ನು ಮಾಡಿ, ತೊಟ್ಟಿಲಿನಲ್ಲಿ ಮಲಗಿಸಿ, ಮುದ್ದು ಮಾಡಿ ಜೋ. . .ಜೋ ಲಾಲಿ ಹಾಡಿ,

ಒಂದು ಸುಂದರ ಹೆಸರನ್ನು ನೀಡಿದುದನ್ನು ಜೀವನಪರ್ಯಂತ ಮುಂದುವರಿಸದೆ, ತಮ್ಮ ಹೆಸರಿನಲ್ಲಿನ ಒಂದಕ್ಷರ ಆಗಿ ಬರಲಿಲ್ಲವೆಂದು, 'ಅದೃಷ್ಟ'ವನ್ನು ಅಟ್ಟಿಸಿಕೊಂಡು ಹೋಗಿ ಪಡೆಯಲೇಬೇಕೆಂಬ ಛಲದಿಂದ, ಸಂಖ್ಯಾಶಾಸ್ತ್ರಜ್ಞರ ಬಳಿ ಸಲಹೆ. ಸೂಚನೆಗಳಿಗಾಗಿ ಹೋಗುವವರನ್ನು ಸಹ ನೋಡಿದ್ದೇವೆ. ಇತ್ತೀಚೆಗೆ ಈ ಪ್ರವೃತ್ತಿ ಜಾಸ್ತಿ ಆಗಿದೆ ಅಂದರೂ ತಪ್ಪಾಗುವದಿಲ್ಲ.

ಅದಿರಲಿ! ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳಿಗೆ ಹೆಸರು ಇಡುವಾಗ (ನಾಮಕರಣ ಮಾಡುವಾಗ) ಯಾವುದೇ ರೀತಿಯ ಸಮಸ್ಯೆಗಳು ನಮಗೆ ಎದಿರಾಗುವುದಿಲ್ಲ. ಸಾಧ್ಯವೇ ಇಲ್ಲ! ಯಾಕೆಂದರೆ ನಮ್ಮಲ್ಲಿ 33 ಕೋಟಿ ದೇವ / ದೇವತೆಯರ ಹೆಸರುಗಳನ್ನೊಳಗೊಂಡ ದೊಡ್ಡ 'ನಿಧಿ'ಯಿದೆ. ನಮ್ಮ ಪುರಾಣಗಳು / ಪುಣ್ಯಕಥೆಗಳಲ್ಲಿ, ಅಷ್ಟೋತ್ತರ / ಸಹಸ್ರನಾಮಗಳಲ್ಲಿ ಯಾವುದಾದರೂ ಹೆಸರನ್ನು ಹುಡುಕಿ ಕಾಣುತ್ತೇವೆ. ಭಾರತದಲ್ಲಿ ಹುಟ್ಟಿ ಬೆಳೆದು, ವಿದ್ಯಾಭ್ಯಾಸ ಮುಗಿಸಿ ವಿದೇಶಕ್ಕೆ ಹಾರಿಹೋಗಿ, ತಮ್ಮ ವಾಸ್ತವ್ಯವನ್ನು ಅದೇ ನೆಲದಲ್ಲಿ ಹೂಡಬೇಕೆಂದು ನಿರ್ಧರಿಸಿ ಹೋದವರಲ್ಲಿ ಹಲವರು, ತಮ್ಮ ಹೆಸರು ಬಹಳ ಉದ್ದಕ್ಕಿದೆಯೆಂದೋ, (ಪಾರ್ಥಸಾರಥಿ, ರಾಮಗೋಪಾಲ, ಇತ್ಯಾದಿ) ಅಥವಾ ವಿದೇಶದವರು ತಮ್ಮ ಹೆಸರನ್ನು ಹೇಳಲು ಹೆಣಗಾಡುತ್ತಾರೆಂದೋ, ತಮ್ಮ ಮೂಲ ಹೆಸರನ್ನು (original) ಮೊಟಕುಗೊಳಿಸವುದುಂಟು. ಮತ್ತೆ ಕೆಲವರು ತಮ್ಮ ತಾತನೋ/ಮುತ್ತಾತನೋ ಯಾವುದೋ ಕಾಲದಲ್ಲಿ ವಾಸವಾಗಿದ್ದ ಹಳ್ಳಿಯ ಹೆಸರನ್ನು (ಒಮ್ಮೆಯೂ ಆ ಹಳ್ಳೀ ಕಡೆ ತಲೆ ಹಾಕದಿದ್ದರೂ) ಚಿಕ್ಕದಾದ ತಮ್ಮ ಹೆಸರಿನ ಕೊನೆಗೆ ಸೇರಿಸಿಕೊಳ್ಳುತ್ತಾರೆ.

ಊರಿನಿಂದ ವಿದೇಶಕ್ಕೆ ಅಪರೂಪವಾಗಿ ಹೋದ ತಂದೆ-ತಾಯಿಗಳಿಗೆ, ಮೊದಲೇ ಭಾಷಾಗೊಂದಲ, (ಆಂಗ್ಲಭಾಷೆಯಲ್ಲಿ ಸ್ವದೇಶದಲ್ಲಿ ಪ್ರಾವೀಣ್ಯತೆ ಪಡೆದಿದ್ದರೂ ಸಹ) ಉಚ್ಚಾರಣ ರೀತಿಯ ಗೊಂದಲ, ತಮ್ಮ ಮಗನಿಗೆ ನಾಮಕರಣ ಮಾಡಿ, ನೀಡಿದ ಹೆಸರು ಯಾವುದು ಎಂದು ಅವರಿಗೇ ಗಲಿಬಿಲಿ ಉಂಟಾಗಿರುವ ಪ್ರಸಂಗಗಳು ಸಾಕಷ್ಟಿವೆ! (ಉದಾ: ಹರಿಕ್ಲೋಸ್ ಪೇಟೆ, ವೆಂಕಟ್ ಕಲಿಯೂರು ಇತ್ಯಾದಿ). ವ್ಯಂಗ್ಯ ಚಿತ್ರಕಾರ ಹಿರಿಯ ಪತ್ರಿಕೋದ್ಯಮಿ ಲೇಖಕರಾಗಿ, 'ರಿಗ್ರೆಟ್ ಐಯ್ಯರ್' (Regret Iyer) ತಾವು ಹೇಗೆ ಪ್ರಖ್ಯಾತಿ ಪಡೆದರು ಎಂಬುದರ ಬಗ್ಗೆ ತಿಳಿಸುತ್ತಾ 'ವಿಷಾದ'ವನ್ನು ವಿನೋದವಾಗಿ ಪರಿವರ್ತಿಸಿಕೊಂಡರು ಎಂದು ಹೇಳಿ, ಆ ಮೂಲಕ ಸಂದೇಶ ಒಂದನ್ನು ಸಾರಿ ಹೇಳಿದ ಕಥೆ, ಹಿಂದೆ ಎಲ್ಲೋ ಓದಿದ ನೆನಪಾಯಿತು. ಈ ಮುಂಚೆ ಅವರು ಸತತವಾಗಿ ಪತ್ರಿಕೆಗಳಿಗೆ ನಿಯತ ಕಾಲಿಕಗಳಿಗೆ ಬರೆದು ಕಳುಹಿಸಿದಾಗಲೆಲ್ಲಾ, ಅವರಿಂದ (ಪತ್ರಿಕೆಗಳಿಂದ) ಬರುತ್ತಿದ್ದ ಉತ್ತರ ಒಂದೇ ಆಗಿರುತ್ತಿತ್ತು. ಅದೇನೆಂದರೆ, 'ಗಾಯಕ್ಕೆ ಉಪ್ಪು ಸವರಿದಂತೆ'', ''ವಿಶ್ವಾಸ ಪೂರ್ವಕವಾಗಿ ತಾವು ಕಳುಹಿಸಿದ ಲೇಖನವನ್ನು ವಿಷಾದ ಪೂರ್ವಕವಾಗಿ ಹಿಂತಿರುಗಿಸುತ್ತಿದ್ದೇವೆ'' ಈಗ ಅಷ್ಟು ಸೌಜನ್ಯತೆ ಎಲ್ಲಿದೆ? ಹರಿದು ಕಸದ ಬುಟ್ಟಿಗೆ ಬೀಳುತ್ತವೆ ನಮ್ಮ ಲೇಖನಗಳು!

ನಾನು ಕಾಲೇಜಿನಲ್ಲಿ ಓದುತ್ತಿರುವಾಗ ಚರಿತ್ರೆ (ಬ್ರಿಟಿಶ್ ಚರಿತ್ರೆ)ಯನ್ನು 'ಐಚ್ಛಿಕ ವಿಷಯ'ವಾಗಿ ಆರಿಸಿಕೊಂಡಿದ್ದೆನು. (Select Subject) ''ಬ್ರಿಟಿಷ್ ಹಿಸ್ಟರಿ'' ಎಂದರೆ ಸಾಲು-ಸಾಲು ಹೆಸರುಗಳನ್ನು ಜ್ಞಾಪಕದಲ್ಲಿರಿಸಿಕೊಳ್ಳಬೇಕು. 'ತಲೆ'ಗೆ ಸಿಕ್ಕಾಪಟ್ಟೆ ಕೆಲಸ. ಅದೂ ಅಲ್ಲದೆ ಬೆರಳೆಣಿಕೆ ಹೆಸರುಗಳು ಪದೇ-ಪದೇ ಚರಿತ್ರೆ ಯಲ್ಲಿ ಬರುವುದರಿಂದಾಗಿ ಅದಲ್ಲದೆ 'ರಾಜ' ಮನೆತನದ ಹೆಸರುಗಳು ಅಂದರೆ ನಮ್ಮ ಜ್ಞಾಪಕಶಕ್ತಿಗೆ ಸವಾಲೇ ಸರಿ! ಅವರಲ್ಲಿ ಜಾರ್ಜ್ ಎಡ್ವರ್ಡ್, , ಲೂಯಿಸ್, ರಿಚರ್ಡ್ ಇತ್ಯಾದಿ ಹೆಸರುಗಳ ಪಕ್ಕಕ್ಕೆ, ತಂದೆ, ತಾತ, ಮುತ್ತಾತ, ಮಗ, ಮೊಮ್ಮಗ ಎಂದು ಗುರುತಿಸಬೇಕಾದರೆ 1,2,3,1,5. . .ಎಂದು ಅಂಕಿಗಳನ್ನು ಸೇರಿಸಬೇಕಾದ ಸವಾಲು ಬೇರೆ, ಅದೂ ರೋಮನ್ ಸಂಖ್ಯೆಗಳು! ಉತ್ತರ ಪತ್ರಿಕೆಯಲ್ಲಿ ಬರೆಯಬೇಕಾದರೆ ಏನಾದರೂ ಎಡವಟ್ಟಾದರೆ, ಪರೀಕ್ಷೆಯಲ್ಲಿ ತೇರ್ಗಡೆಯಾದಂತೆಯೇ! ಯುರೋಪ್‌ನ ಚರಿತ್ರೆಯಲ್ಲಿಯೇ ದೀರ್ಘಕಾಲ ಆಳಿದ ದೊರೆಯೆಂದೆನಿಸಿಕೊಂಡವರು. ಲೂಯಿ-14(Louis-XIV) (77 ವರ್ಷಗಳು, 110 ದಿನಗಳು ಎಂಬ ದಾಖಲೆ) ಅವನಾದ ನಂತರ ಅವನ ಮರಿಮಗ (5 ವರ್ಷದ ಬಾಲಕ) ರಾಜನಾದನು. (ಫ್ರಾನ್ಸ್ ದೇಶಕ್ಕೆ) ಬ್ರಿಟಿಷ್ ಮಹಾರಾಣಿ (ಈಗಿನ ಅವಳು 'ಆರನೆಯ ಜಾರ್ಜ್' ದೊರೆಯ ಮೊದಲನೆಯ ಮಗಳು (George- VI) .

'ತಲೆ'ಬಿಸಿಯಾಗಿರಬಹುದಲ್ಲವೇ? ಈ ಚರಿತ್ರೆ ಇತಿಹಾಸ, ಪುರಾಣ, ಅಂಕಿಗಳು, ಅಕ್ಷರಗಳು – ಇದೇನಿದು, ಈಗ್ಯಾಕೆ, ಈ ವಿವರಗಳು ಯಾರಿಗೆ ಬೇಕು ಇವೆಲ್ಲಾ ಎಂದೆನಿಸಿರಬಹುದು. ಇವೆಲ್ಲಾ ಪೀಠಿಕೆ ಎಂದು ಹೇಳಿದರೆ ತಪ್ಪಾಗಲಾರದು. ಬೆಳಿಗ್ಗೆ ವರ್ತಮಾನ ಪತ್ರಿಕೆ ತೆಗೆದ ಕೂಡಲೇ ಮೊದಲನೆಯ ಪುಟದಲ್ಲಿದ್ದ ಸುದ್ದಿ ಕಣ್ಣಿಗೆ ಬಿದ್ದು ಶಾಕ್ ಆಯಿತು. ಪಾಪ! ದೂರದರ್ಶನ (ರಾಷ್ಟ್ರೀಯ) ದಲ್ಲಿ ವಾರ್ತೆ ಓದಲು ಬಂದವಳ ಪಾಡು ಕೇಳಿ ಬೇಸರವಾಯಿತು. ಬೀದಿ ನಾಯಿಯಂತೆ ಅವಳನ್ನು ಕೆಲಸದಿಂದ ಓಡಿಸಿ ಬಿಟ್ಟಿದ್ದೂ ಅಲ್ಲದೆ ವರ್ತಮಾನ ಪತ್ರಿಕೆಗಳ ಮೂಲಕ ಜಗಜ್ಜಾಹಿರ ಪಡಿಸಿದರು. ಅವಳು ಮಾಡಿದ ತಪ್ಪೇನು ಎಂದು ಗೊತ್ತಾ? ನಮ್ಮ ದೇಶಕ್ಕೆ ಚೀನಾ ಪ್ರಧಾನ ಮಂತ್ರಿ ಪತ್ನಿ ಸಮೇತ ಬಂದಿಳಿದಿರುವ ವಿಷಯ ಎಲ್ಲರಿಗೂ ತಿಳಿದದ್ದೇ! ಅವರ ಹೆಸರನ್ನು ತಪ್ಪಾಗಿ ಹೇಳಿದುದರಿಂದ ಕೆಲಸಕ್ಕೆ ಕತ್ತರಿ ಪ್ರಯೋಗವಾಯಿತು. xi ಜಿನ್‌ಪಿಂಗ್ (ಕ್ಸಿಜಿನ್ ಪಿಂಗ್) ಎನ್ನುವುದಕ್ಕೆ ಬದಲಾಗಿ (ಲೂಯಿ XIV (14 ನೆಯ), ಜಾರ್ಜ್ VI (6ನೆಯ) ಅನ್ನುವಂತೆ (11). ಜಿನ್‌ಪಿಂಗ್ ಎಂದು ಹೇಳಿ ಹೆಸರು ಕೆಡಿಸಿಕೊಂಡಳು ಪಾಪ! ದೂರದರ್ಶನದಿಂದ ಬಲುದೂರ ಓಡಿಸಿಯೇ ಬಿಟ್ಟರು. ಎಷ್ಟೊಂದು ಕನಸುಗಳನ್ನು ಹೊತ್ತು, (6 ಗಂಟೆ) ಹೊತ್ತು ಮೂಡುವ ಮೊದಲೇ ಬಂದಿದ್ದಳೋ ಏನೋ! ಕೇಂದ್ರದಿಂದ ನೇರವಾಗಿ ಯಾರಾದರೂ ಪ್ರಖ್ಯಾತ ಸಂಖ್ಯಾ ಶಾಸ್ತ್ರಜ್ಞರ ಬಳಿ ಹೋಗಿರಬಹುದೆಂಬ ಗುಮಾನಿ ನನಗಿದೆ. ಅಲ್ಲಾ ಒಬ್ಬೊಬ್ಬರಿಗೆ ಒಂದೊಂದು 'ನ್ಯಾಯ'ವೇ? ಸುಮಾರು ಒಂದು ವರ್ಷದ ಹಿಂದೆ ಓರ್ವ ಕೇಂದ್ರ ಮಂತ್ರಿ, ವಿದೇಶಾಂಗ ಮಂತ್ರಿಗಳ ವಿಶೇಷ ಸಭೆಯಲ್ಲಿ, ಅದೂ ವಿಶ್ವಸಂಸ್ಥೆಯಲ್ಲಿ (United Nations Organisation) ಬೇರೊಂದು ಸಭೆಗಾಗಿ ಅವರ ಆಪ್ತ ಕಾರ್ಯದರ್ಶಿ ಬರೆದು ಕೊಟ್ಟಿದ್ದ ಭಾಷಣವನ್ನು ತೆಗೆದೋದಲು ಪ್ರಾರಂಭಿಸಿದರು. (ಕೆಲವು ಕ್ಷಣಗಳ ನಂತರ ತಮ್ಮ ತಪ್ಪಿನ ಅರಿವು ಅವರಿಗಾಯಿತು) ಸರಿ! ಆದರೆ 'ಮಾಧ್ಯಮ' ದವರ ಮಿಂಚಿನ ಕಣ್ಣಿಗೆ ಗೋಚರವಾಗಿ ಸಾಕಷ್ಟು ಪ್ರಚಾರವಾದರೂ, ಪ್ರಭಾವಿತ ವ್ಯಕ್ತಿಗಳ ತಪ್ಪು ಮುಚ್ಚಿ ಮರೆಯಾಗಲು ಹೆಚ್ಚು ವೇಳೆ ತಗಲುವುದಿಲ್ಲ ಎಂಬುದು ಎಲ್ಲರಿಗೂ ಅನುಭವ ವೇದ್ಯ. ಆನೆಗಳ 'ನೆನಪು' ಸಹ ಬಹುಬೇಗ ಮಾಸಿ ಮರೆಯಾಗಿ ಹೋಗುವುದು ಕೂಡ ಸತ್ಯಸಂಗತಿ! ಪತ್ರಿಕೆ ಓದಿದ ಮೇಲೆ ನನಗನ್ನಿಸಿದುದನ್ನು ನಿಮ್ಮೊಡನೆ ಹರಟೆ ಹಂಚಿಕೊಂಡಿದ್ದೇನೆ. ■


## MATRIMONIAL

Alliance invited from well educated, well settled South Indian/ Maharashtrian Brahmin Boys (Mumbai Preferred) for 27 years / 5'6"/Practicing Dentist BDS, PGDBM, Vasisth Gothra Kannada Madhwa Brahmin Girl of Professional Parents. Please contact: 9757362651 Email: mmargikar@hotmail.com

***

Alliance Invited from Well Educated working Kannada Brahmin Girls / South Indian (Mumbai Preferable) for 29 year / 5'11"/BE, MBA-Kashyap Gothra Smartha Brahmin Boy well settled in Mumbai. Please contact 9833488416 Email: saraswathi.mvmurthy@gmail.com

***

Alliance invited for a Madhva Brahmin boy Age 31 years Bharadwaja Gothra, Moola -4th Pada, Dhanur Rashi Height – 5'.11". Fair complexion BE, MBA, MS (FIN) Chicago working for a MNC Bank in Mumbai Girl wanted with service in Mumbai (Smartha, Madhva, Shivalli, Brahmin) professionally qualified form a good family. Contact : Mr. Guruprasad 022 -27743329 / 9022799600.

# ಹಿಂದೆ ತಿರುಗಿ ನೋಡಿದಾಗ...... ಸುರಿದ ಕಂಬನಿ....!

ಏನೋ ಸದ್ದು! ತಿರುಗಿ ನೋಡಿದಾಗ ಚಿಕ್ಕ ಪಾಪುವೊಂದು ರಸ್ತೆಯ ಬೀದಿಯಲ್ಲಿ ತನ್ನ ಕೈಯಲ್ಲಿದ್ದ ತಟ್ಟೆಯನ್ನು ಮೇಲಕ್ಕೊ, ಕೆಳಕ್ಕೊ ಅಲ್ಲಾಡಿಸಿ ಅಲ್ಲಿಂದ ದಾಟಿ ಹೋಗುತ್ತಿರುವವರನ್ನು ಆಶಾಕಿರಣದ ನೋಟದಿಂದ ನೋಡುತ್ತಿರುವ ದೃಶ್ಯ ಕಂಡಿತು ಸೃಷ್ಟಿಗೆ. ಓಡಿ ಹೋಗಿ ಆ ಮಗುವನ್ನು ಎತ್ತಿ ಮುದ್ದಾಡಿಸಿ, ಅದಕ್ಕೇನು ಬೇಕು ಅದನ್ನು ಕೊಡಿಸುವ ಎಂದೆನಿಸಿತು ಅವಳಿಗೆ. ಆ ಒಂದು ಘಳಿಗೆಯಲ್ಲಿ, ಅವಳ ಗತಜೀವನದ ಕಹಿನೆನಪುಗಳು ಅವಳ ಕಣ್ಣೆದುರಿಗೆ ಬಂದು ಸುಳಿದವು.

ಆಗಿನ ಕಾಲದ ಕೆಂಪು ಫ್ರೊಕ್ ಹಾಕಿಕೊಂಡು ತನ್ನ ಪುಟ್ಟ ಹೆಜ್ಜೆಗಳಿಂದ ಗೆಜ್ಜೆಯ ಸದ್ದು ಮಾಡುತ್ತಾ ಮನೆಯ ಪೂರ್ತಿ ಓಡಾಡುತ್ತ ಆನಂದವನ್ನು ಪಸರಿಸಿದ್ದಳು ಸೃಷ್ಟಿ. ಅವಳನ್ನು ಪ್ರೀತಿಸುವ, ಮುದ್ದಿಸುವ, ಲಾಲಿಸುವ ಮೂರು ಜೀವ ಅ ಮನೆಯಲ್ಲಿದ್ದವು. ಅವಳ ತಾಯಿ-ತಂದೆ, ಅಣ್ಣ ಹುಟ್ಟಿನಿಂದಲೇ ಔಷಧಗಳನ್ನು ಅವಲಂಬಿಸುತ್ತಾ ಬಂದಿದ್ದ ಜೀವ. ಆದ್ದರಿಂದ ಎಲ್ಲರೂ ಅವಳನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ಅ ನಗರದಲ್ಲಿ ತಂದೆಗೆ ಕೆಲಸ ಸರಿಯಾಗಿ ಕೂಡಿ ಬಾರದ್ದರಿಂದ ದುಡಿಯುವವರನ್ನು ತಾಯಿಯಂತೆ ಕೈಬೀಸಿ ಕರೆಯುವ ಮಹಾನಗರ ಮುಂಬಯಿಗೆ ಸೃಷ್ಟಿಯು ತನ್ನ ಪರಿವಾರದೊಂದಿಗೆ ಪಾದಾರ್ಪಣೆಗೈದಿದ್ದಳು. ಅವಳ ಆ ಪುಟ್ಟ ಶರೀರದಲ್ಲಿ ಎತ್ತಿ ಕಾಣುವ ಭಾಗವೆಂದರೆ ಅವಳೆರಡು ಕಂದು ಬಣ್ಣದ ಆಕರ್ಷಿತವಾದ ಕಣ್ಣುಗಳು ಮಾತ್ರ.

ಅಣ್ಣನನ್ನು ಶಾಲೆಗೆ ಸೇರಿಸಿದಾಗ, ತಾನೂ ಶಾಲೆಗೆ ಹೋಗುವೆನೆಂಬ ಹಟ ಆಕೆಯದು. ಏನು ಮಾಡುವುದು. . . ? ಪುಟ್ಟ ಶರೀರವಾದರೂ ಅಳುವಾಗ ಎಲ್ಲಿಂದ ಶಕ್ತಿ ಪ್ರದಾನವಾಗುತ್ತಿತ್ತೋ? ದೇವರೆ ಬಲ್ಲರು. ಅವಳ ಆ ಸದ್ದು ಸಹಿಸಲಸಾಧ್ಯವಾದಾಗ ತಾಯಿ ಶಾಲೆಗೆ ಹೋಗಲೇಬೇಕಾಯಿತು. ಆದರೆ, "ಮಗುವಿಗೆ ಆರು ವರ್ಷ ಆಗಿದ್ದರೆ ಮಾತ್ರ ಶಾಲೆಗೆ ಪ್ರವೇಶ ಸಿಗುವುದು, ಇಲ್ಲದಿದ್ದರೆ ಇಲ್ಲ" ಎಂದು ಖಡಾಖಂಡಿತವಾಗಿ ಮುಖ್ಯೋಪಾಧ್ಯಾಯರು ಶಾಲಾನಿಯಮವನ್ನು ತಾಯಿಗೆ ತಿಳಿಸಿದ್ದರು. ಆದರೆ ಸೃಷ್ಟಿಗೆ ಆಗ ನಾಲ್ಕು ವರ್ಷ ಆಗಿರುವುದರಿಂದ ಏನೂ ಮಾಡಲು ಸಾಧ್ಯವಿಲ್ಲ. ದಿನನಿತ್ಯ ಅಣ್ಣ ಶಾಲೆಯ ಗಣವೇಶ ಹಾಕಿ, ಚೆಂದ ಚೆಂದದ ಹೊಸ ಪುಸ್ತಕಗಳನ್ನು ತನ್ನ ಶಾಲಾಬ್ಯಾಗಿನಲ್ಲಿ ತುರುಕಿಸಿ, ಸೃಷ್ಟಿಯ ಕೆನ್ನೆಯನ್ನು ಎಳೆದು, ಅವಳನ್ನು ಅಣಕಿಸಿ, ಓಡಿ ಹೋಗುವ ಆ ಶೈಲಿ ಸೃಷ್ಟಿಯನ್ನು ದಿನಾಲು ರೇಗಿಸುತ್ತಿತ್ತು. ಅಂತೂ ಇಂತೂ ಸೃಷ್ಟಿಯ ದಿನನಿತ್ಯದ ಹಟ ತಾಂಡವ ರೂಪವನ್ನೇ ತಾಳಿಬಿಟ್ಟಿತು. ಕಡೆಗೆ ತಾಯಿ ಪ್ರಾಂಶುಪಾಲರಲ್ಲಿಗೆ ತನ್ನ ಮಗಳ ಪ್ರಾಯ ಹೆಚ್ಚು ಮಾಡಿ ಒಂದು ಪತ್ರ ಬರೆದು ಸಲ್ಲಿಸಿ ಮಗಳನ್ನು ಶಾಲೆಗೆ ಸೇರಿಸಿದರು. ಮಗಳ ಶಾಲೆಗೆ ಹೋಗುವ ಆಸೆಯನ್ನು ಪೂರೈಸಿದರು. ಈಗ ಸೃಷ್ಟಿ ದಿನಾಲು ಅಣ್ಣನೊಂದಿಗೆ ಅವನ ಕೈ ಹಿಡಿದು ಶಾಲೆಗೆ ಹೋಗುತ್ತಿದ್ದಳು. ವರ್ಷದಲ್ಲಿ ಸಿಗುವ ಹಬ್ಬ ಹರಿದಿನಗಳ, ಹಾಗೂ ವಾರದ ಒಂದು ರಜೆ ಬಿಟ್ಟರೆ ಅವಳ್ಯಾವತ್ತೂ ರಜೆ ಮಾಡಲಾರಳು. ಎಷ್ಟೇ ಮಳೆ ಬರಲಿ, ಜ್ವರ ಇರಲಿ ಸೃಷ್ಟಿಯು ಶಾಲೆಗೆ ದಿನಾಲು ಹಾಜರು. ಅಣ್ಣನು ತರಗತಿಯಲ್ಲಿ ಪ್ರಥಮ ಬಂದರೆ ತಾನೂ ಬರಬೇಕೆನ್ನುವ ಹಟ ಅವಳು ಹಾಗೆಯೇ ಮಾಡಿಯೂ ತೋರಿಸಿದಳು. ಆ ಚಿಕ್ಕ ಪ್ರಾಯದಲ್ಲೇ ಕೆಂಪು ಶ್ಯಾಯಿ ಪೆನ್ನು ಪುಸ್ತಕದಲ್ಲಿ ಬರೆಯುವುದಕ್ಕೆ ಆಲ್ ರೈಟ್ ಹೊಡೆಯಲಿಕ್ಕೆ ಉಪಯೋಗಿಸುತ್ತಾರೆ ಎಂಬುದು ಅವಳಿಗೆ ಎಲ್ಲಿಂದ ತಿಳಿಯಿತೋ ಯಾರು ಬಲ್ಲರು ಒಟ್ಟಾರೆ ತನ್ನ ಮನೆಕೆಲಸ ಪುಸ್ತಕಕ್ಕೆ ರೈಟ್ ಹಾಕುತ್ತಾ ಹೋಗುತ್ತಿತ್ತು ತನಗೆ ಸಿಕ್ಕಿದಂತೆ ಕೆಂಪು ರಿಫಿಲ್‌ನಿಂದ ಆ ಪುಟ್ಟ ಕೈ.



ಅರ್ಚನಾ ರಮೇಶ್

ಜೀವನದ ಏಳು-ಬೀಳು, ಸುಖ-ದುಃಖ, ಸಂಘರ್ಷ-ಹರುಷ ಇವೆಲ್ಲವುಗಳಿಂದ ದೂರವಾಗಿದ್ದಳು ಬಾಲೆ ಸೃಷ್ಟಿ. ಆದರೆ ಮುಂಬಯಿಗೆ ಬಂದ ಮೇಲೆ ತಂದೆಯ ಗೆಳೆಯರ ಸಂಖ್ಯೆ ಹೆಚ್ಚಾಯಿತು. ಅವರೊಡನೆ ಕೂಡಿ ತಂದೆಯು ಕುಡಿಯುವ ದುಶ್ಚಟಕ್ಕೆ ಬಲಿಯಾದರು. ಇನ್ನೂ ಈ ಜೀವಕ್ಕೆ ಎಷ್ಟೊಂದು ಕಾರ್ಪಣ್ಯಗಳನ್ನು ಎದುರಿಸಬೇಕಾಗು ವದೋ.... ಎಂದು ಶಾಂತವಾಗಿ ನಿದ್ರಾದೇವಿಯ ಮಡಿಲಿಗೆ ಸೇರಿದ ಸೃಷ್ಟಿಯನ್ನು ನೋಡಿ ಅವಳ ತಾಯಿ ಎಷ್ಟೋ ಸಲ ಕಂಬನಿ ಸುರಿಸಿದ್ದುಂಟು.

ಅದೊಂದು ದಿನಪೂರ್ತಿ ಸೃಷ್ಟಿಯು ತಂದೆಗಾಗಿ ಕಾದು, ಕಾದು ಹಸಿವಿನಿಂದ ಬಳಲಿ, ಆಕರ್ಷಿತವಾದ ಆ ಪುಟ್ಟ ಕಣ್ಣಿನಿಂದ ಅದೆಷ್ಟೋ ಕಂಬನಿ ಸುರಿಸಿ ಹಾಗೆಯೇ ನೆಲದಲ್ಲಿ ನಿದ್ದೆ ಹೋದಳು. ಮಧ್ಯರಾತ್ರಿಯವರೆಗೆ ಅವಳಣ್ಣನೂ ನಿದ್ರಾಲೋಕಕ್ಕೆ ಪ್ರವೇಶಗೈದಿರಬೇಕು. ಗಂಡನ ಬರುವಿಕೆಯನ್ನು ಕಾಯುತ್ತಾ ಹಾಗೆಯೇ ನೆಲದಲ್ಲಿ ತಲೆಯ ಮೇಲೆ ಕೈಯಿಟ್ಟು ಇನ್ನೂ ಸೃಷ್ಟಿಯ ತಾಯಿ ಕುಳಿತಿದ್ದಳು. ಪ್ರಚಂಡವಾದ ಘನಘೋರವಾದ ಕತ್ತಲಲ್ಲಿ ಒಬ್ಬಂಟಿ ಜೀವ ಹೆದರಿ ಹೆಂಡ ಕುಡಿದು ರಾದ್ಧಾಂತ ಮಾಡಿದಂತೆ, ಮಧ್ಯರಾತ್ರಿಯ ಆ ವೇಳೆಯಲ್ಲಿ ಸೃಷ್ಟಿಯ ತಂದೆಯ ಆಗಮನವಾಯಿತು. ತನ್ನ ಮೇಲೆ ತನಗೆ ನಿಯಂತ್ರಣವಿಲ್ಲದೆ ಈಗೇನು ಬೀಳುವೆನೋ ಅನ್ನುವ ಸ್ಥಿತಿಯಲ್ಲಿ ಹೆಜ್ಜೆಯಿಡುತ್ತಾ ಮನೆಯೊಳಗೆ ಬಂದವನು ಮತಿಯಿಲ್ಲದೆ ಪುಟ್ಟ ಮಗುವಿನ ಹಸಿದ ಹೊಟ್ಟೆಯ ಮೇಲೆ ಕಾಲಿಟ್ಟು ತನ್ನ ಶರೀರದ ಪೂರ್ತಿ ಭಾರ ಹಾಕಿದಾಗ ಜೋರಾಗಿ ಚೀರಿದ್ದಳು ಸೃಷ್ಟಿ. ಶಾಂತ ವಾತಾವರಣದಲ್ಲಿ ಒಮ್ಮೆಲೆ ಅಶಾಂತಿ ಹಬ್ಬಿದಂತೆ ಇತ್ತು ಅಂದಿನ ವಾತಾವರಣ.

ಹೆಂಡದ ಮಾಯೆ ತಂದೆಯನ್ನು ಎಷ್ಟರ ಮಟ್ಟಿಗೆ ಆವರಿಸಿತ್ತೆಂದರೆ ಹೆಂಡತಿ, ಮುದ್ದಿನ ಮಕ್ಕಳು ಯಾರೂ ಕಾಣಿಸದಾದರು. ತಂದೆಯ ಮೇಲಿನ ಪ್ರೀತಿ ದಿನಂದಿಂದ ದಿನಕ್ಕೆ ನಶಿಸುತ್ತಾ ಹೋಯಿತು. ಬಾಡಿಗೆ ಮನೆಯಲ್ಲಿ ಜೀವನ ಸಾಗಿಸುವುದು ಎಷ್ಟೊಂದು ಕಷ್ಟಕರ ಎಂಬುದು ಬಾಡಿಗೆ ಮನೆಯಿಲ್ಲಿರುವವರಿಗೆ ಮಾತ್ರ ಗೊತ್ತು, ಅನುಭವಿಸಿದವರಿಗೆ ಮಾತ್ರ ಗೊತ್ತು. ಅದೂ ಇಂತಹ ತನ್ನ ಜವಾಬ್ದಾರಿಯಿಂದ ಹಿಂದೆ ಸರಿದ ತಂದೆಯನ್ನು ಆಶ್ರಯಿಸಿರುವುದಂತೂ ನಿಷ್ಫಲ. ಯಾವತ್ತಾದರೂ ಮಾವ ಬಂದರೆ ಪುಟ್ಟ ಮಕ್ಕಳ ಮುದ್ದು ಮುಖ ನೋಡಿ ಮಮ್ಮಲ ಮರುಗಿ ಆ ಮಕ್ಕಳಿಗೆ ಏನಾದರೂ ಕೊಡಿಸು ಎಂದು ತಾಯಿ ಕೈಯಲ್ಲಿ ಖರ್ಚಿಗಿಂತಿಷ್ಟು ಕೊಟ್ಟಿದುದೂ ಉಂಟು. ಆದರೆ ಆ ಕಾಸನ್ನು ಅನಿವಾರ್ಯವಾಗಿ ಮನೆಖರ್ಚಿಗೆ ಉಪಯೋಗಿಸ ಬೇಕಾಗುತ್ತಿತ್ತು. ಪ್ರತಿವರ್ಷ ತರಗತಿಯಲ್ಲಿ ಅಣ್ಣ-ತಂಗಿಯರಿಬ್ಬರೂ ಪ್ರಥಮ ರ್‍ಯಾಂಕ್ ಬಂದಾಗ ಶಿಕ್ಷಕರಿಂದ ಹಿಡಿದು ಸುತ್ತ ಮುತ್ತಲಿನ ಎಲ್ಲರೂ ಅವರಲ್ಲಿ ಸಿಹಿತಿಂಡಿ ಕೇಳಿದುದುಂಟು. ಆದರೆ ಪ್ರತಿ ಸಲ ಮಾರ್ಚ್, ಎಪ್ರಿಲ್

ತಿಂಗಳಲ್ಲಿಯೇ ತಂದೆ ಕೆಲಸ ಬಿಟ್ಟು, ಹೆಂಡಕ್ಕೆ ಶರಣಾಗಿ, ತನ್ನ ಕಾರುಬಾರು ತೋರಿಸುವುದೇ ನಿಯಮವಾಗಿ ಹೋಗಿತ್ತು. ಈ ಪರಿಸ್ಥಿತಿಯಲ್ಲಿ ಮಕ್ಕಳು ಅದೆಷ್ಟೋ ಬಾರಿ ಮರುಗಿದ್ದುಂಟು. ಒಂದು ವೇಳೆ ತಾಯಿ ಮಾವ ಇಲ್ಲದೇ ಇರುತ್ತಿದ್ದರೆ ಆ ಪುಟಾಣಿಗಳು ಭಿಕ್ಷೆ ಬೇಡಿ ಜೀವನ ಸಾಗಿಸಬೇಕಾಗುತ್ತಿತ್ತೋ ಏನೋ. ಅಂತೂ ಪ್ರಾಯಕ್ಕೆ ಮೀರಿ ಅನುಭವಸ್ಥರಾದರು ಆ ಚಿಕ್ಕ ಮಕ್ಕಳು. ಅಣ್ಣ ಶಾಲೆಯಲ್ಲಿರುವಾಗಿನಿಂದಲೇ ದುಡಿಯಲಾರಂಭಿಸಿ ತಾಯಿಗೆ ಸಹಾಯ ಮಾಡುತ್ತಿದ್ದ. ಅಣ್ಣ ಮತ್ತು ತಾಯಿ ಪಡುವ ಬವಣೆ ನೋಡಿ ತನ್ನ ಎಲ್ಲಾ ಆಸೆಗಳನ್ನು ಸಂಗ್ರಹಿಸಿ ದೂರ ಕಡಲಿನಿಂದಾಚೆಗೆ ಎಸೆದು ಬಂದಳು ಸೃಷ್ಟಿ ಎಂದರೆ ತಪ್ಪಾಗಲಾರದು. ಅಂತೂ ಮನೆಯಲ್ಲಿ ಸೃಷ್ಟಿ, ಅಣ್ಣ, ತಾಯಿ ಮೂವರು ಎದೆಯಂತರಾಳದ ನೋವನ್ನು ತೋರಿಸದೆ ಮನೆಯ ತುಂಬಾ ಹರುಷದ ಹೊನಲನ್ನು ಸೃಷ್ಟಿಸಲು ಪ್ರಯತ್ನಿಸಿದ್ದರು.

ಆ ಪುಟ್ಟ ಹುಡುಗಿ ಬೆಳೆದು ಕಾಲೇಜಿಗೆ ಹೋಗಲಾರಂಭಿಸಿದಾಗ ಕೂಡಾ ಮನೆಯಲ್ಲಿ ಯಾವುದೇ ವಸ್ತುಗಳಿಗಾಗಿ ಹಟ ಮಾಡಿದ್ದಿಲ್ಲ. ದೀಪಾವಳಿಯ ಸಮಯದಲ್ಲಿ ಎಲ್ಲ ಮಕ್ಕಳು ಪಟಾಕಿ ಉರಿಸುತ್ತಿದ್ದರು. ಈ ಮಕ್ಕಳು ನೋಡಿ ಮರುಗುವವರು. ಕಾಲೇಜಿನಲ್ಲಿ ಇತರ ಹುಡುಗಿಯರು ಬೆಲೆಬಾಳುವ ಉಡುಗೆ-ತೊಡುಗೆಗಳನ್ನು ಹಾಕಿಕೊಂಡು ಬಂದರೂ, ಯಾವತ್ತೂ ಬಾಯಿಬಿಟ್ಟು ಮನೆಯಲ್ಲಿ ಆಕ್ಷೇಪಿಸಿದವಳಲ್ಲ ಸೃಷ್ಟಿ. ಮನಸ್ಸಿನಲ್ಲಿ ಮರುಗಿ, ತನ್ನನ್ನು ತಾನು ಸಮಾಧಾನಿಸುತ್ತಿದ್ದಳು. ಆದರೂ ತನ್ನ ತಂಗಿ ಹೆಸರಾಂತ ಕಾಲೇಜಿಗೆ ಹೋಗುವಾಗ ಬೇರೆಯವರಂತೆ ಹೋಗಬೇಕೆನ್ನುವ ಆಸೆ ತಂಗಿಗಾಗಿ ಹೊಸ ಬಟ್ಟೆ ತರಲು ಅಣ್ಣನನ್ನು ಪ್ರೇರೆಪಿಸಿತು. ಆದರೆ ಕಾಲೇಜಿನ ಮಕ್ಕಳು ಆರು ದಿನಕ್ಕೆ ವಿಧ-ವಿಧದ ಬಟ್ಟೆ ಹಾಕುವಾಗ ಈ ಹುಡುಗಿಗೆ ಒಂದೆರಡು ಸಾಕಾಗುವುದೇ? ಆದರೂ ಇದ್ದುದರಲ್ಲಿಯೇ ಸಂತೃಪ್ತಿಯನ್ನು ಪಡೆದುಕೊಂಡಳವಳು. ಕಾಲೇಜಿಗೆ ಹೋಗುವಾಗ ದಿನಾಲೂ ಎರಡು ರೂಪಾಯಿ ಬಸ್ಸು ಖರ್ಚನ್ನು ಕೊಂಡು ಹೋಗುವ ಸೃಷ್ಟಿಗೆ ಗೆಳೆಯ-ಗೆಳತಿಯರು ಪಾರ್ಟಿ ಕೇಳುವಾಗ ಇಲ್ಲ ಎನ್ನಲು ಜೀವಕ್ಕೆ ಬರುತ್ತಿತ್ತು. ಅದಕ್ಕೆ ಅವಳು ತನ್ನನ್ನು ಗೆಳೆಯರ ಚಟುವಟಿಕೆಗಳಿಂದಲೂ ದೂರವಿರಿಸಿದ್ದಳು.

ಅಂತೂ ಡಿಗ್ರಿ ಮುಗಿಸಿದ ನಂತರ ಆಕೆಗೆ ಶಿಕ್ಷಣ ನಿಲ್ಲಿಸುವುದು ಇಷ್ಟವಾಗಲಿಲ್ಲ. ಒಟ್ಟಿಗೆ ಇನ್ನೂ ಮನೆಯವರ ಮೇಲೆ ಅವಲಂಬಿತವಾಗಿರುವುದು ತೆರನಲ್ಲ ಅನಿಸಿದ ಅವಳು ಶಾಲೆಗೆ ಶಿಕ್ಷಕಿಯಾಗಿ ಸೇರಿಕೊಂಡಳು. ಚಿಕ್ಕಂದಿನಿಂದಲೇ ಕಂಡು ಬರುತ್ತಿರುವ ಶಿಕ್ಷಕಿಯಾಗುವ ಕನಸ್ಸನ್ನು ನೆರವೇರಿಸಲೆಂದೇ ಅವಳು ಮುಂದುವರಿದಳು. ಜೀವನದ ನಿಜವಾದ ಸಂಘರ್ಷ ಇನ್ನು ಬಹಳಷ್ಟಿದೆ ಎಂದು ಅರಿತ ಅವಳ ಹೃದಯಂತರಾಳದ ಬಯಕೆ ಒಂದೇ. . . . ತಾನು ಸಾಮರ್ಥ್ಯವಿದ್ದಷ್ಟು ಬಡಮಕ್ಕಳಿಗೆ ಸಹಾಯ ಮಾಡುವುದು ಯಾಕೆಂದರೆ ಅವಳಿಗೂ ಬೇರೆಯವರಿಂದ ಸಹಾಯ ಲಭಿಸಿದೆ. ಬಡಮಕ್ಕಳ ಉಜ್ವಲ ಭವಿಷ್ಯಕ್ಕೆ ಶಿಕ್ಷಣ ಅಗತ್ಯ. ಅದಕ್ಕೆ ಆ ಮಕ್ಕಳನ್ನು ಹುರಿದುಂಬಿಸುವ ಅನುಭವೀ ವ್ಯಕ್ತಿಗಳ ಸಹಾಯ -ಸಹಕಾರ ಅಗತ್ಯ. ಇನ್ನೂ ಸರಿಯಾಗಿ, ಪೂರ್ಣರೀತಿಯಲ್ಲಿ ಬಡತನದಿಂದ ಹೊರಗೆ ಬಾರದವಳು ಆದರೆ ಸಾಧಿಸಿಯೇ ತೋರಿಸುವೆನು ಎಂಬ ಛಲವುಳ್ಳವಳು. ಹಿಂದೆ ತಿರುಗಿ ನೋಡಿದಾಗ ಆಕರ್ಷಿತವಾದ ಕಂಗಳಿಂದ ಕಂಬನಿ ಹೇಗೆ ಸುರಿಯಿತು ಎಂಬುದರ ಅರಿವೇ ಅಗಲಿಲ್ಲ ಸೃಷ್ಟಿಗೆ.

---

# ಮೂವತ್ತಮೂರು ಮಹಿಳೆಯರು ಹಚ್ಚಿಟ್ಟ ಹಣತೆ

ಸೃಜನಾ ಮುಂಬಯಿ ಕನ್ನಡ ಲೇಖಕಿಯರ ಬಳಗ ತನ್ನ ಹತ್ತು ವರ್ಷಗಳನ್ನು ಪೂರೈಸಿದ ದಶಮಾನೋತ್ಸವದ ಸಂದರ್ಭದಲ್ಲಿ ಬಿಡುಗಡೆ ಗೊಳಿಸಿರುವ ಕೃತಿ “ಹಚ್ಚಿಟ್ಟ ಹಣತೆ”. ಈ ಕೃತಿಯಲ್ಲಿ ಮೂವತ್ತಮೂರು ಲೇಖಕಿಯರು ತಮ್ಮ ಜೀವನದ ಇತಿವೃತ್ತವನ್ನು ತೆರೆದಿಟ್ಟಿದ್ದಾರೆ. ಈ ಸಂಕಲನವನ್ನು ‘ಅನುಭವ ಕಥನ’ ಎಂದು ಕರೆದಿದ್ದರೂ ಸಂಪಾದಕೀಯದಲ್ಲಿ ಇದನ್ನು ಬಳಗದ ಲೇಖಕಿಯರ ಆತ್ಮಕಥನಾತ್ಮಕ ವೃತ್ತಾಂತಗಳ ಸಂಕಲವೆಂದೇ ಹೇಳಿದ್ದಾರೆ. ಮೂವತ್ತಮೂರು ಲೇಖಕಿಯರಲ್ಲಿ ಕೇವಲ ಒಬ್ಬ ಲೇಖಕಿ ಡಾ.ವಾಣಿ ಉಚ್ಚಿಲ್‌ಕರ್ ಅವರು ಮಾತ್ರ ತಮ್ಮ ಪಿಎಚ್.ಡಿ ಮಾಡಿದ ಅನುಭವಗಳನ್ನು ಹೇಳಿಕೊಂಡಿದ್ದರೆ ಉಳಿದ ಎಲ್ಲಾ ಲೇಖಕಿಯರು ತಮ್ಮ ಹುಟ್ಟಿನಿಂದ ಇಂದಿನವರೆಗೆ ಬೆಳೆದು ಬಂದ ದಾರಿಯನ್ನು , ತಾವು ಈ ದೂರದ ಮುಂಬಯಿಯಲ್ಲಿ ಅರಳಿರುವ ಬಗೆಯನ್ನು ಪರಾಮರ್ಶಿಸಿದ್ದಾರೆ.

ಮೂರು ನಾಲ್ಕು ಲೇಖಕಿಯರ ಹೊರತು ಉಳಿದವರೆಲ್ಲಾ ಕರ್ನಾಟಕದಲ್ಲಿ ಹುಟ್ಟಿ ಮದುವೆಯ ನಂತರ ಮುಂಬಯಿಗೆ ಬಂದು ಸಂಸಾರ ಹೂಡಿದವರು. ಪ್ರತಿಯೋರ್ವ ಲೇಖಕಿಯೂ ತಮ್ಮ ಬಾಲ್ಯದ ದಿನಗಳನ್ನು, ಶಾಲಾ ಕಾಲೇಜಿನಲ್ಲಿ ಕಳೆದ ಸಂತಸದ ಕ್ಷಣಗಳನ್ನು ತಮ್ಮ ಆಪ್ತ ಗೆಳತಿಯರನ್ನು ಮುದದಿಂದ ನೆನೆದಿದ್ದಾರೆ. ಬಹಳಷ್ಟು ಲೇಖಕಿಯರ ನೆನಪಿನ ದೋಣಿ ತಾವು ಅಜ್ಜ, ಅಜ್ಜಿಯಂದಿರ ಜೊತೆ ಕಳೆದ ಸಂತಸದ ದಿನಗಳನ್ನು ಮೆಲುಕು ಹಾಕುವಷ್ಟು ಹಿಂದೆ ಸಾಗಿದೆ. ದೂರದ ಕೇರಳದ ಪ್ರವಾಸದಲ್ಲಿ ಕಾಡಿನಲ್ಲಿ ಸುತ್ತುವಾಗ ಅಲ್ಲಿಯ ಲಾವಂಚದ ಪರಿಮಳ ಮಿತ್ರಾರವರಿಗೆ ತಮ್ಮ ಅಜ್ಜಿಯನ್ನು ನೆನಪಿಸುತ್ತದೆ. ಅಜ್ಜನ ಮನೆಯಲ್ಲಿ ಅಜ್ಜನ ಪ್ರೀತಿಯ ಮೊಮ್ಮಗಳಾಗಿ ಓಡಾಡುವಾಗ ‘ನಾನೇ ರಾಜಕುಮಾರಿ’ ಅಂತ ಅಂದುಕೊಳ್ಳುತ್ತಿದ್ದರಂತೆ ಅಮಿತಾ ಭಾಗವತ್. ಕೆಲವು ಲೇಖಕಿಯರು ಅಂದಿನ ಕಾಲದಲ್ಲಿ ವಿಧವೆಯರ ಕೇಶ ಮುಂಡನದ ಹೀನ

**✍ ರಮಾ ಉಡುಪ, ಥಾಣೆ**

ಪರಿಸ್ಥಿತಿಯ ಬಗ್ಗೆ ನೊಂದು ಬರೆದಿದ್ದಾರೆ. ಮಿತ್ರಾರ ಅಜ್ಜಿಯೊಬ್ಬರು ಸಕೇಶಿಯಾದ್ದರಿಂದ ಅವರ ಅತ್ತೆಯೂ ಆಕೆ ಕೊಟ್ಟ ನೀರು ಕುಡಿಯುತ್ತಿರಲಿಲ್ಲವಂತೆ. ಮತ್ತೊಬ್ಬರು ದೊಡ್ಡಮ್ಮ ಗಂಡ ತೀರಿ ಹೋದಾಗ ಅವರ ಗಂಡ ಬಹಳ ಆಧುನಿಕ ಮನೋಧರ್ಮದವರಾದ್ದರಿಂದ ಕೇಶಮುಂಡನಕ್ಕೆ ತಾನು ತಲೆಯೊಡ್ಡಬೇಕೇ ಎಂಬ ಸಂಧಿಗ್ಧತೆಯಲ್ಲಿರುವಾಗ ಮನೆಯಲ್ಲಿ ಎದ್ದ ಗುಸು ಗುಸು ಅಸಮಾಧಾನದಿಂದ ಜಿಗುಪ್ಸೆಗೊಂಡು ತಾನೇ ಸ್ವತಃ ತಮ್ಮ ಕೂದಲನ್ನು ಕತ್ತರಿಸಿಕೊಂಡಿದ್ದರಂತೆ. ವಿದ್ಯಾ-ದೇಶಪಾಂಡೆಯವರ ಅಜ್ಜಿ ಸಣ್ಣ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡು ಕೇಶಮುಂಡನ ಮಾಡಿಸಿಕೊಂಡಿದ್ದಾರೆ. ಆದರೆ ಅದೇ ಪರಿಸ್ಥಿತಿ ತನ್ನ ಸೊಸೆಗೂ ಎದುರಾದಾಗ -“ಸಣ್ಣ ವಯಸ್ಸಿನಲ್ಲೇ ಮಡಿಯಾಗಿ ಅನುಭವಿಸಿದ್ದು ಸಾಕು, ನನ್ನ ಸೊಸೆಗೆ ಆ ಶಿಕ್ಷೆ ಬೇಡ” ಎಂದು ಮುಂದೆ ಸೊಸೆ ಓದಿ, ನೌಕರಿ ಹಿಡಿಯುವಂತೆ ಮಾಡಿದ ಪುಣ್ಯಾತ್ಮೆ. ವಿಧವೆಯರಿಗೆ ಸಮಾಜದಲ್ಲಿ ಎಲ್ಲಿಲ್ಲದ ಕಟ್ಟುಪಾಡು. ಅವರು ಗಂಡಸರ ನೆರಳನ್ನು ಹಾದುಹೋಗಬಾರದು. ಆದರೆ ವಿಧವೆಯರ ಕೇಶ ಮುಂಡನಕ್ಕೆ ಮಾತ್ರ ಗಂಡಸರೇ ಬೇಕು. “ಅಂದು ಕ್ಷೌರಿಕನ ಎದುರು ನಮ್ಮಜ್ಜಿ ಕುಳಿತಾಗ ಮಾತ್ರ ಅವನ ಕೈ ಅವರ ತಲೆ, ಗಲ್ಲ ಹೀಗೆ ಎಲ್ಲೆಲ್ಲೂ ತಾಗುತ್ತಿತ್ತಲ್ಲ” ಎಂದು ನೊಂದು ಬರೆದಿದ್ದಾರೆ ಶಕುಂತಲ ಪ್ರಭುರವರು.

ಕೆಲವರು ಹುಟ್ಟು ಕೂಡಾ ಕೂತೂಹಲಕಾರಿ. ತುಳಸಿ ಹಬ್ಬದ ದಿನ ಹುಟ್ಟಿದ ಮಗಳನ್ನು ತಕ್ಷಣವೇ 'ತುಳಸಿ' ಎಂದು ನಾಮಕರಣ ಮಾಡಿದವರು ತುಳಸಿ ವೇಣುಗೋಪಾಲರ ತಂದೆ. ಮನೆಯಲ್ಲೇ ಹುಟ್ಟಿದ್ದ ಮಗುವಿಗೆ ಅಜ್ಜಿ ಬಿಸಿನೀರು ತರಲೆಂದು ಒಳಗೆ ಹೋದ ವೇಳೆಗೆ ಬೆಕ್ಕು ಬಂದು ರಕ್ತ ಸಿಕ್ತ ಮಾಂಸದ ಮುದ್ದೆಗೆ ಬಾಯಿ ಹಾಕಲು ಹೋಗಿತ್ತಂತೆ. ಅಜ್ಜಿ ಬಂದು ಪಾರು ಮಾಡದಿದ್ದರೆ ಶ್ಯಾಮಲಾ ಮಾಧವರವರು ಇಂದು ನಮ್ಮೊಡನೆ ಇರುತ್ತಿರಲಿಲ್ಲ! ಹುಟ್ಟುವ ಮೊದಲೇ ತಂದೆಯನ್ನು ಕಳೆದುಕೊಂಡವರು ವಿದ್ಯಾ ದೇಶಪಾಂಡೆ. ಆದರೆ ಮುಂದೆ ಯಾರೂ ಅವರನ್ನು ಅದರ ಬಗ್ಗೆ ದೂಷಿಸಲಿಲ್ಲ, ಹಳಿಯಲಿಲ್ಲ ಎನ್ನುವುದು ಅವರಿಗೆ ಹೆಮ್ಮೆಯ ಸಂಗತಿ. ಬೂದೆ ಅಮವಾಸ್ಯೆಯಂದು ಹುಟ್ಟಿದ ಹೇಮಾ ಅಮೀನ್ ರವರಿಗೆ ತಿಂಗಳ ಕೊನೆಯಲ್ಲಿ ಉಪ್ಪು, ಮೆಣಸು, ಎಣ್ಣೆ, ಅಕ್ಕಿ, ನಾಲ್ಕಾಣೆ ಇವೆಲ್ಲವನ್ನೂ ತಲೆ ಮೇಲಿನಿಂದ ತಿರುಗಿಸಿ ದಾನ ಮಾಡುತ್ತಿದ್ದರಂತೆ. ಮೂಲಾ ನಕ್ಷತ್ರದಂದು ಹುಟ್ಟಿದ ಯಶೋದಾ ಶೆಟ್ಟಿಯವರ ಜನ್ಮ ಕುಂಡಲಿಯನ್ನು ಮಾಡಲು ನಿರಾಕರಿಸಿದ್ದರಂತೆ ಅವರ ಅಜ್ಜಿ. ಜಿ. ಪಿ. ಕುಸುಮ ಮತ್ತು ಅವರ ಅಕ್ಕ ಹೆಣ್ಣೆಂದು ಅವರ ತಂದೆಯ ಸಿಡುಕಿಗೆ ಕಾರಣವಾಗಿತ್ತಂತೆ. ಹಾಗಾಗಿ ತಂದೆಯ ಕೋಪವನ್ನು ಸಹಿಸದ ಮಗು ಬೆಳೆದದ್ದು ಊರಿನಲ್ಲಿ ದೊಡ್ಡಮ್ಮನ ಜೊತೆಗೆ. ಮೀನುಗಾರಿಕೆಯೇ ಜೀವನವಾಗಿದ್ದ ಕೆಳ ಮಧ್ಯಮ ವರ್ಗದ ಮನೆಯಲ್ಲಿ ಮಗುವಿಗೆ ತಾಯಿಯಾಗಿ ಶಿಕ್ಷಣ ನೀಡಿದ ಹೆಗ್ಗಳಿಕೆ ಆ ದೊಡ್ಡಮ್ಮನದ್ದು. ತಮ್ಮ ಇಂದಿನ ಸ್ವಾವಲಂಬೀ ಜೀವನಕ್ಕೆ ಕಾರಣರಾದ ದೊಡ್ಡಮ್ಮನನ್ನು ಕೃತಜ್ಞತೆಯಿಂದ ನೆನೆಯುತ್ತಾರೆ ಕುಸುಮ.

ಕಂಪ್ಯೂಟರ್, ಮೊಬೈಲ್‌ಗಳು ಇಲ್ಲದಿದ್ದ ಸಮಯದಲ್ಲಿ ಊರಿನ ಮುಕ್ತ ವಾತಾವರಣದಲ್ಲಿ ಕಳೆದ ಬಾಲ್ಯದ ದಿನಗಳ ಬಗ್ಗೆ ಎಲ್ಲರೂ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಮನೆಯ ಅಂಗಳದಲ್ಲಿ ಬೆಳೆದ ಮಲ್ಲಿಗೆ, ಜಾಜಿ, ಗುಲಾಬಿ, ತುಳಸಿ, ಕನಕಾಂಬರ, ಗೋರಂಟಿ ಹೂಗಳು, ಮಾವು, ಹಲಸು, ತೆಂಗು, ಕಂಗಿನ ಮರಗಳು, ಮನೆಯ ಹತ್ತಿರದ ತೋಡು, ಗದ್ದೆ, ಹೊಳೆ, ಸಮುದ್ರ, ಹಟ್ಟಿಯ ದನ ಕರುಗಳು, ಮನೆಯ ಟೈಗರ್, ಮಂಗ ಕಂಠ ಬೆಕ್ಕುಗಳು, ಶಾಲೆಗೆ ಹೋಗುವಾಗ ತಿಂದು ಸವಿಯುತ್ತಿದ್ದ ಕುಂಬಳ, ಜೋಗಿ ಹಣ್ಣುಗಳು, ಗೆಳತಿಯರೊಡನೆ ಆಡುತ್ತಿದ್ದ ಕುಂಟಾಬಿಲ್ಲೆ, ಚನ್ನೆಮಣೆ, ಹಗ್ಗದಾಟ, ಕಲ್ಲಾಟ, ಜೋಕಾಲಿ ಆಟಗಳು ಸಿಹಿ ನೆನಪುಗಳು ಮುಂಬೈಯನ್ನು ಸೇರಿ ಇಷ್ಟು ವರ್ಷದ ನಂತರವೂ ಎಲ್ಲರ ಮನಸ್ಸಿನ ಮೂಲೆಯಲ್ಲಿ ಬೆಚ್ಚಗೆ ಕೂತಿವೆ.

ಹಿರಣ್ಣಯ್ಯ ನಾಟಕ ಕಂಪನಿಯ ಸಂಪೂರ್ಣ ರಾಮಾಯಣ ನಾಟಕ ನೋಡುತ್ತಾ ಮೈಮರೆತು ಕುಳಿತ ಗಾಯತ್ರಿ ರಾಮು ರಾತ್ರಿ ಒಂದು ಗಂಟೆಯ ವೇಳೆಗೆ ದಾರಿಯ ದೀಪದ ಕಂಬದ ಮಬ್ಬು ಬೆಳಕಿನಲ್ಲಿ ಹೆದರಿ ಒಬ್ಬಳೇ ಓಡುತ್ತಾ ಮನೆ ಸೇರಿ ಅಮ್ಮನ ಮಡಿಲು ಸೇರಿದ್ದು, ತಾಯಿ ಸಿಟ್ಟಾದಾಗ ಮನೆಬಿಟ್ಟು ನಡೆದೂ ನಡೆದೂ ಒಂದು ಹಳ್ಳದಲ್ಲಿ ಗಿಡದ ಕಾಯಿಗಳನ್ನು ಕಟ್ಟಿ ಕಾಲಿಗೆ ಗೆಜ್ಜೆ ಮಾಡಿಕೊಂಡು, ಕಾಡಿನ ಬಳ್ಳಿಯ ಹೂಗಳನ್ನು ಕೊರಳಿಗೆ ಹಾರ ಮಾಡಿಕೊಂಡು ಸಂಭ್ರಮಿಸಿದ ದಾಕ್ಷಾಯಣೀ ಯಡಹಳ್ಳಿ, ಮನೆಯಲ್ಲಿ ಅಮ್ಮ ಬರೀ ಸೊಪ್ಪಿನ ಅಡಿಗೆಯನ್ನೆ ಮಾಡುತ್ತಿದ್ದಳೆಂದು ಮನೆಯ ಆರೂ ಮಕ್ಕಳು ಮನೆಯ ಮುಂದೆ ಮಾವಿನ ಮರದಡಿ ಸತ್ಯಾಗ್ರಹ ಮಾಡಿದ ಮೀನಾ ಕಳಾವರ, ಆದರೆ ಬಡತನದ ಬೇಗೆಯಲ್ಲಿ ಬರೀ ಬಿಸಿ ಅನ್ನವನ್ನು ಉಂಡೆ ಕಟ್ಟಿ ಉಣ್ಣಿಸುತ್ತಿದ್ದ ಅಮ್ಮನ ಕೈ ತುತ್ತಿನ ಸವಿಯನ್ನು ನೆನಿಸಿಕೊಳ್ಳುವ ಅನಿತಾ ಪೂಜಾರಿ – ಹೀಗೆ ಪ್ರತಿಯೊಬ್ಬರ ಬಾಲ್ಯವೂ ವರ್ಣಮಯ. ಮನೆಯಲ್ಲಿ ನೀರು ಸೇದುವ ಹುಡುಗ ಬಾವಿಗೆ ಬಿದ್ದಾಗ ಅವನನ್ನು ಮೇಲೆಳೆಯಲು ಬಾವಿಗೆ ಹಗ್ಗ ಬಿಟ್ಟರೆ ತನ್ನ ಕುತ್ತಿಗೆಗೆ ಉರುಳು ಹಾಕಿಕೊಂಡು ಎಳೆಯಲು ಹೇಳಿದ ಮುಗ್ಧ ಶಿರಪ್ಪಾ, ಚೌತಿಯಂದು ಚಂದ್ರನನ್ನು ನೋಡಿದ ತಪ್ಪಿಗೆ ರಾತ್ರಿ ಯಾರಿಗೂ ಗೊತ್ತಿಲ್ಲದಂತೆ ಮನೆಯ ಮೀನಿನ ಕಸವನ್ನು ಎದುರು ಮನೆ ಆತ್ಮಾರಮನ ಮನೆ ಮುಂದೆ ಸುರಿದು ಬೆಳಿಗ್ಗೆ ಅವರ ಬೈಗುಳ ತಿಂದು ಚಂದ್ರನನ್ನು ಕಂಡ ಶಾಪದಿಂದ ಮುಕ್ತಳಾದ ಅರುಷಾ ಶೆಟ್ಟಿಯ ತುಂಟತನ ಇಂಥ ಘಟನೆಗಳು ತುಟಿಯಲ್ಲಿ ನಗು ಮೂಡಿಸುತ್ತವೆ. ಕೃಷಿಕ ಕುಟುಂಬದಲ್ಲಿ ಹುಟ್ಟಿದ ಸುನೀತಾ ಶೆಟ್ಟಿಯವರು ಮಳೆಗಾಲದಲ್ಲಿ ಗದ್ದೆ ನಾಟಿಯ ಸಂಭ್ರಮ, ಸುಗ್ಗಿ ಬಿತ್ತನೆಯ ನಂತರ ಗದ್ದೆಯಲ್ಲಿ ಕಲ್ಲುಗುಂಡನ್ನು ಮನೆಯ ಯಜಮಾನ ಹಾವಿನ ರೀತಿ ಎಳೆದುಕೊಂಡು ಹೋಗುತ್ತಿದ್ದ ರೀತಿ, ಅದರ ಹಿಂದಿನ ಆಶಯ, ಆಷಾಢ ತಿಂಗಳಲ್ಲಿ ಮನೆಯ ಮಗಳನ್ನು ಕರೆಸಿಕೊಂಡು ಕುಟುಂಬ ಸಂಭ್ರಮಿಸುತ್ತಿದ್ದ ರೀತಿ ಹೀಗೆ ಮರೆಯಾಗುತ್ತಿರುವ ನಮ್ಮ ಸಂಸ್ಕೃತಿಯನ್ನು ಪರಿಚಯಿಸಿದ್ದಾರೆ.

ಹೆಚ್ಚಿನವರ ಮನೆಯಲ್ಲಿ ಮನೆ ತುಂಬಾ ಮಕ್ಕಳು. (ಕೆಲವರ ಮನೆಯಲ್ಲಿ ಕ್ರಿಕೆಟ್ ಟೀಮ್ ಕೂಡಾ!) ಆದರೂ ಯಾರ ಮನೆಯಲ್ಲೂ ಹೆಣ್ಣು ಮಕ್ಕಳೆಂದು ತಿರಸ್ಕಾರವಾಗಲೀ, ಅಥವಾ ಹುಡುಗಿಯರೆಂದು ಹೆಚ್ಚು ಕಟ್ಟುಪಾಡುಗಳು ಇಲ್ಲದೆ ಎಲ್ಲರೂ ಬಾಲ್ಯದ ಸಿಹಿನೆನಪುಗಳನ್ನು ಹೊಂದಿದ್ದಾರೆ. ಮಿತ್ರಾರವರ ಮನೆಯಲ್ಲಿ ಆರು ಹೆಣ್ಣು ಮಕ್ಕಳ ನಡುವೆ ಹುಟ್ಟಿದ ಒಬ್ಬ ತಮ್ಮನ ಹುಟ್ಟಿದ ಹಬ್ಬವನ್ನು ಮಾತ್ರ ಪ್ರತಿ ವರ್ಷವೂ ಗಡದ್ದಾಗಿ ಆಚರಿಸುತ್ತಿದ್ದರು. ಅದರ ಬಗ್ಗೆ ಯಾವುದೇ ಹೊಟ್ಟೆಕಿಚ್ಚು ಮತ್ಸರವಿಲ್ಲದೆ, 'ಸಮಾನತೆ'ಯ ಬಗ್ಗೆ ತಲೆ ಕೆಡಿಸಿಕೊಳ್ಳದೇ ಬೆಳೆದ ಕಾಲವದು. ಮುಂಬೈಯಲ್ಲಿಯೇ ಬೆಳೆದ ಮಮತಾ ರಾವ್‌ರವರು ಅರವತ್ತರ ದಶಕದಲ್ಲಿ ದಕ್ಷಿಣ ಭಾರತೀಯರ ವಿರುದ್ಧ ಶಿವಸೇನೆಯ ಕರಾಳ ಆಕ್ರಮಣದ ಬಗ್ಗೆ ನೋವಿನಿಂದ ಬರೆದಿದ್ದಾರೆ. ತಾಯಿಯ ದಬ್ಬಾಳಿಕೆಯಿಂದಾಗಿ ತಂದೆಯನ್ನೇ ಹೆಚ್ಚು ಆಶ್ರಯಿಸಿದ್ದ ಮಮತಾರವರು ತಮ್ಮ ತಂದೆ ಬಾಲ್ಯದಲ್ಲಿ ಬಡತನದಿಂದಾಗಿ fountain ಬಳಿ ವಾಸಿಸುತ್ತಿದ್ದ ಜಾಗದ ಬಗ್ಗೆ ಬಹಳ ಭಾವುಕರಾಗಿ ಬರೆದಿದ್ದಾರೆ.

ಆದರೆ ಎಲ್ಲರಿಗಿಂತ ಭಿನ್ನ ಬಾಲ್ಯ ಗಿರಿಜಾ ಶಾಸ್ತ್ರಿಯವರದ್ದು. ನೆನಪಿಸಿಕೊಳ್ಳಲು ಇಚ್ಛಿಸದಂತಹ ಬಾಲ್ಯ. ಹುಟ್ಟುವಾಗಲೇ ಇದ್ದ ಕತ್ತಿನ ಊನದಿಂದಾಗಿ ಎಲ್ಲರಿಂದಲೂ 'ಜೊತ್ತಿ' ಎಂದೋ 'ಕತ್ತುರಗಿ' ಎಂದೋ ಹಂಗಿಸಿಕೊಂಡು, ಯಾರೂ ಗೆಳತಿಯರಿಲ್ಲದೆ, ಶಾಲೆಯ ನಾಟಕ, ನೃತ್ಯಗಳಲ್ಲಿ ಭಾಗವಹಿಸಲು ಸಾಧ್ಯವಾಗದೇ ಕನ್ನಡಿಯಲ್ಲಿ ತನ್ನನ್ನು ನೋಡಿಕೊಳ್ಳಲೂ ಇಚ್ಛಿಸದೆ, ಎಲ್ಲರಿಂದ ತಿರಸ್ಕಾರಕ್ಕೊಳಗಾಗಿ ಬಂಡಾಯದ ಹೆಣ್ಣಾಗಿ ಬೆಳೆದವರು ಗಿರಿಜಾ ಶಾಸ್ತ್ರಿ. ಮುಂದೆ ತಾವೇ ಹೋಗಿ ಬೆಂಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿ ಕತ್ತಿನ ಆಪರೇಶನ್ ಮಾಡಿಸಿಕೊಂಡು ಇಂದು ದಿಟ್ಟ ಬಾಳ್ವೆ ಸಾಗಿಸುತ್ತಿರುವ ಗಿರಿಜಾರವರು ನಿಜಕ್ಕೂ ಪ್ರಶಂಸನೀಯರು.

ಹೆಚ್ಚಿನ ಲೇಖಕಿಯರು ಓದುವ ಹವ್ಯಾಸ ಬೆಳೆಸಿಕೊಂಡಿದ್ದು ತಮ್ಮ ಶಾಲಾ ದಿನಗಳಲ್ಲೇ. ತ್ರಿವೇಣಿ, ಎಂ. ಕೆ. ಇಂದಿರಾ, ಅನಕೃ, ತ.ರಾ.ಸು ಮುಂತಾದವರ ಕಾದಂಬರಿಗಳು ಇಂದಿನ ಟಿವಿ ಸೀರಿಯಲ್‌ಗಿಂತ ಹೆಚ್ಚು ಮನೋರಂಜನೆ ನೀಡುತ್ತಿದ್ದವು ಎನ್ನುವುದು ಅಕ್ಷರಶಃ ಸತ್ಯ. ಬಹಳಷ್ಟು ಜನರು ತಮ್ಮ ಗುರುಗಳೇ ತಮ್ಮ ಸಾಹಿತ್ಯದ ಅಭಿರುಚಿಗೆ ಕಾರಣಕರ್ತರು ಎಂದು ಕೃತಜ್ಞತೆಯಿಂದ ನೆನೆದಿದ್ದಾರೆ. ಶಾಲಾ ದಿನಗಳಲ್ಲಿ ಒಳ್ಳೆಯ ಉತ್ತರ ಬರೆದು ಅಧ್ಯಾಪಕರಿಂದ ಹೊಗಳಿಸಿಕೊಂಡಿದ್ದು, ಕೆಲವೊಮ್ಮೆ ಬೈಗುಳ, ಹೊಡೆತ ತಿಂದದ್ದು, ಶಾಲಾ ವಾರ್ಷಿಕೋತ್ಸವದ ದಿನ ಎಲ್ಲ ಮಕ್ಕಳಿಗೂ ಗುತ್ತಿನ ಗದ್ದೆಯ ಒಂದೊಂದು ಇಡೀ ಕಬ್ಬು ಕೊಡುತ್ತಿದ್ದರಂತೆ. ಮಕ್ಕಳು ಇಡೀ ಕಬ್ಬನ್ನು ಹೊತ್ತು ಒಯ್ಯುವ ದೃಶ್ಯ ಹೇಗಿದ್ದಿರಬಹುದು? ಕಾಲೇಜಿನ ದಿನಗಳಲ್ಲಿ ತಮ್ಮ ನೋವು, ನಲಿವನ್ನು ಹಂಚಿಕೊಂಡ ಗೆಳತಿಯರನ್ನು ಯಾರೂ ಇಂದಿಗೂ ಮರೆತಿಲ್ಲ ಮತ್ತು ಕೆಲವರು ಈಗ ಫೇಸ್‌ಬುಕ್ ಮುಖಾಂತರ ಪುನಃ ಸಂಪರ್ಕಿಸುವುದರಲ್ಲೂ ಯಶಸ್ವಿಯಾಗಿದ್ದಾರೆ.

ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ತಂದೆ ಇಷ್ಟ. ಗಂಡು ಮಕ್ಕಳಿಗೆ ತಾಯಿ ಇಷ್ಟ ಎನ್ನುವುದು ವಾಡಿಕೆ. ಹಾಗೆಯೇ ಇಲ್ಲಿನ ಲೇಖಕಿಯರೂ ತಮ್ಮ ತಂದೆಯ ಬಗ್ಗೆ ಒಂದೆರಡು ಸಾಲು ಬರೆದಿದ್ದಾರೆ. ಎಲ್ಲರಿಗೂ ತಮ್ಮ ತಂದೆಯ ಶಿಸ್ತು, ವ್ಯಕ್ತಿತ್ವ, ನಡತೆ ಎಲ್ಲವೂ ಪ್ರಿಯವಾಗಿದೆ. ಶಾರದಾ ಅಂಬೇಸಂಗೆಯವರು ಮೂರು ವರ್ಷದವರಾಗಿದ್ದಾಗಲೇ ತಂದೆ ತೀರಿ ಹೋದ್ದರಿಂದ ಮನೆಯ ಜವಾಬ್ದಾರಿ ವಹಿಸಿಕೊಂಡವರು ಹಿರಿಯಣ್ಣ. ಆತನೇ ಇವರ ಪಾಲಿಗೆ ತಂದೆ. "ನನ್ನ ಜೀವನದ ಅತೀ ಪ್ರಮುಖ ವ್ಯಕ್ತಿಯಾಗಿ ಪ್ರಭಾವ ಬೀರಿದವನು" ಎಂದು ಸ್ಮರಿಸಿದ್ದಾರೆ. ಶಾರದಾ ಅಂಚನ್ ರವರ ತಂದೆ ಕುಡುಕ. ಪ್ರತಿ ದಿನ ತಾನು ಗಳಿಸಿದ ಹಣದಲ್ಲಿ ಒಂದಷ್ಟು ಕುರುಕಲು ತಿಂಡಿ, ಬಾಳೆಹಣ್ಣು, ಮೀನು ತಂದರೆ ತನ್ನ ಜವಾಬ್ದಾರಿ ಮುಗಿಯಿತು ಎಂದು ತಿಳಿದಾತ. ಆದರೆ ಅಂತಹ ತಂದೆಯ ಬಗ್ಗೆಯೂ "ಮಕ್ಕಳನ್ನು ಸಾಕುವುದು, ತನ್ನ ಜವಾಬ್ದಾರಿ ಎನ್ನುವ ಸತ್ಯವೇ ತಿಳಿಯದಷ್ಟು ಮುಗ್ಧ ನನ್ನ ತಂದೆ ಎಂದು ಹೇಳಿಕೊಳ್ಳುವಂತಹ ಮಗಳನ್ನು ಪಡೆದಿರುವ ಧನ್ಯ ಆ ತಂದೆ".

ಶಾಲಾ ಕಾಲೇಜಿನ ದಿನಗಳ ಅಂತರ್ಜಾತೀಯ ವಿವಾಹ ಅಥವಾ ಪ್ರೇಮ ವಿವಾಹ ಬಹಳ ವಿರಳ. ಅಂದಿನ ದಿನದಲ್ಲಿ ಹುಡುಗನನ್ನು ನೋಡದೆಯೇ ಹಿರಿಯರು ನಿಶ್ಚಯಿಸಿದ ಮದುವೆಗೆ ಒಪ್ಪಿದ ಸುಮಿತ್ರಾ ಗುಜರನ್, ಸುಶೀಲಾ ದೇವಾಡಿಗ ಅವರ ಬಗ್ಗೆ ಕೇಳಿದರೆ ಇಂದಿನ ಮಕ್ಕಳು ಮೂಗಿನ ಮೇಲೆ ಬೆರಳಿಟ್ಟಾರು! ಮದುವೆಯ ದಿನ ದೇವಸ್ಥಾನದಲ್ಲಿ ಒಬ್ಬ ಕಪ್ಪು ವರನನ್ನು ನೋಡಿ ಸುಶೀಲಾ ತಬ್ಬಿಬ್ಬಾಗಿದ್ದರಂತೆ. ತಮ್ಮ ಮದುವೆಯ ವರ ಇನ್ನೂ ಬಂದಿಲ್ಲ ಎನ್ನುವ ವಿಷಯ ತಿಳಿದ ಮೇಲೆ ಸಮಾಧಾನದ ಉಸಿರೆಳದರಂತೆ! ತಂದೆ ತಾಯಿಯವರಿಗೆ ತಮ್ಮ ಮಗಳು ಒಳ್ಳೆಯ ಮನೆ ಸೇರಬೇಕೆನ್ನುವ ಹಂಬಲ. ಮಕ್ಕಳಿಗೆ ತಮ್ಮ ತಂದೆ ತಾಯಿಯವರು ಸರಿಯಾದ ವರನನ್ನೇ ನೋಡುತ್ತಾರೆ ಎನ್ನುವ ಅಚಲ ನಂಬಿಕೆ, ವಿಶ್ವಾಸ ಅಂದಿನ ಭದ್ರ ಕುಟುಂಬ ವ್ಯವಸ್ಥೆಗೆ ಕಾರಣವಾಗಿತ್ತು. ಊರಿನ ದೊಡ್ಡ ಮನೆಗಳನ್ನು ತೊರೆದು ಮುಂಬಯಿಯ ಹಕ್ಕಿ ಗೂಡಿಗೆ ಕಾಲಿಟ್ಟಾಗ, ಹೊಸ ಜಾಗ, ಹೊಸ ಜನ ಎಲ್ಲರನ್ನೂ ತಲ್ಲಣಗೊಳಿಸಿದೆ. ತುಳಸಿ ವೇಣುಗೋಪಾಲ್ ಹೇಳಿದಂತೆ "ಮುಂಬಯಿ ನಗರ ಒಂದು ಕೌತುಕವಾಗಿ, ತಲ್ಲಣವಾಗಿ, ಚೇತನವಾಗಿ, ಭಯವಾಗಿ, ಸವಾಲಾಗಿ ನನ್ನನ್ನು ಕಾಡಿದೆ, ಕಾಪಾಡಿದೆ" ಇದು ಹೆಚ್ಚು ಕಡಿಮೆ ಮುಂಬಯಿ ಸೇರಿದ ಎಲ್ಲಾ ಮಹಿಳೆಯರ ಅನುಭವವೇ ಎನ್ನಬಹುದು.

ಗಂಡನ ಅಶಿಸ್ತಿನ ಬಗ್ಗೆ ಅಸಮಾಧಾನವಿದ್ದ ಅಕ್ಷತಾ ದೇಶಪಾಂಡೆ ಅದರ ಬಗ್ಗೆ ಗಂಡನನ್ನು ಪ್ರಶ್ನಿಸಿದಾಗ ಅವರು ನೀಡಿದ ಉತ್ತರದಿಂದ "ನಾನು ಹೇಗಿದ್ದೇನೋ ಹಾಗೆ ನನ್ನನ್ನು ಸ್ವೀಕರಿಸಿದ್ದಾರೆ. ನಾನೇ ಯಾಕೆ ಅವರನ್ನು ಬದಲಿಸಲು ಹೋದೆ" ಎಂದು ಅವರು ಹೇಗಿದ್ದಾರೋ ಹಾಗೇ ಸ್ವೀಕರಿಸುತ್ತಾ ಹೋದೆ ಎಂದು ತಮ್ಮ ಸುಲಲಿತ ದಾಂಪತ್ಯದ ಬಗ್ಗೆ ಹೇಳಿದ್ದಾರೆ. ಬಹುಷಃ ಈ ರೀತಿಯ ಮನೋವೃತ್ತಿ ಭದ್ರ ದಾಂಪತ್ಯದ ಬುನಾದಿಯಾಗಿರಬೇಕು.

ಅಂದಿನ ದಿನದಲ್ಲಿ ದಿಟ್ಟತನದಿಂದ ಅಂತರ್ಜಾತೀಯ ವಿವಾಹವಾದವರು ಮುಂಬಯಿಯಲ್ಲೇ ಬೆಳೆದ ಮಮತಾರಾವ್ ಮತ್ತು ಚಿಕ್ಕಂದಿನಲ್ಲೇ ಬಂಡಾಯವೆದ್ದ ಗಿರಿಜಾಶಾಸ್ತ್ರಿಯವರು. ಇಬ್ಬರ ಮನೆಯಲ್ಲೂ ಸಾಕಷ್ಟು ಕೋಪದ, ಅಸಮಾಧಾನದ ಹೊಗೆ ಎದ್ದಿತ್ತು. "ಮದುವೆಯಾಗಿ ಮೂವತ್ತೈದು ವರ್ಷ ಕಳೆದರೂ ಒಡೆದ ಕನ್ನಡಿ ಮಾತ್ರ ಇನ್ನೂ ಕೂಡಿ ಬರಲಿಲ್ಲ" ಎಂದು ನೊಂದು ನುಡಿದಿದ್ದಾರೆ ಮಮತಾ ರಾವ್.

ಮುಂಬಯಿಯಂತಹ ಮಹಾನಗರದಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಗಂಡಂದಿರು ತರುವ ವೇತನದಲ್ಲಿ ಸಂಸಾರ ನೌಕೆಯನ್ನು ಸಮತೋಲದಿಂದ ನಡೆಸಿಕೊಂಡು ಹೋಗುವುದು ಸುಲಭದ ಮಾತಲ್ಲ. 70–80 ರ ದಶಕದಲ್ಲಿ ಮುಚ್ಚಿ ಹೋದ ಕಂಪನಿಗಳು, ಕೆಲಸ ಕಳೆದುಕೊಂಡ ಗಂಡಂದಿರು, ಅನಿರೀಕ್ಷಿತವಾಗಿ ಬಂದೊದಗಿದ ಆಪತ್ತುಗಳು, ಮಕ್ಕಳ ಅನಾರೋಗ್ಯ ಇಂಥಾ ಸಮಸ್ಯೆಗಳು ಎಲ್ಲರನ್ನೂ ಕಾಡಿವೆ. ಆದರೆ ಯಾರೂ ಧೃತಿಗೆಡದೆ ಪುಟಿದೇಳುವ ಚೆಂಡಿನಂತೆ ಮೇಲೆ ಎದ್ದಿದ್ದಾರೆ. ದೂರದ ಮುಂಬಯಿಯಲ್ಲಿ ಕಷ್ಟಕಾಲದಲ್ಲಿ ನೆರವಾದವರು ಬಂಧುಗಳಿಗಿಂತ ಹೆಚ್ಚಾಗಿ ಆಪ್ತ ಗೆಳತಿಯರು. ಅಕ್ಷತಾರವರ ಗಂಡನ ಕಿಡ್ನಿ ಫೇಲ್ ಆದಾಗ ಆಕೆಯ ಗೆಳತಿ ಕಿಡ್ನಿ ನೀಡಲು ತಯಾರಿದ್ದರಂತೆ. ಮದುವೆಯಾಗಿ ಹದಿನೈದು ವರ್ಷದ ನಂತರ ಗರ್ಭಿಣಿಯಾದ ವಿದ್ಯಾ ದೇಶಪಾಂಡೆಯವರಿಗೆ ಸೀಮಂತಕ್ಕೆ ಊರಿಗೆ ಹೋಗಲು ಸಾಧ್ಯವಾಗದಿದ್ದರಿಂದ ಗೋರೆಗಾಂವ್‌ನ ಕನ್ನಡ ಸಂಘದ ಗೆಳತಿಯರು ಮಾಡಿದ ಸೀಮಂತ ಬಹಳ ಅದ್ದೂರಿಯಾದದ್ದು! ಯಶೋದಾ ಶೆಟ್ಟಿಯವರ ಕಂಪನಿ ಮುಚ್ಚಿದಾಗ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ಜೀವನಕ್ಕೆ ಆಧಾರವಾಗಿದ್ದವರು ಅವರ ಗುಜರಾತಿ ಗೆಳತಿ.

ದೂರದ ಮುಂಬಯಿಯಲ್ಲಿ ಜೀವನದ ಏಳು–ಬೀಳುಗಳ ನಡುವೆಯೂ ಪ್ರತಿಯೊಬ್ಬರೂ ಕನ್ನಡ ಸಂಘಗಳ ಜೊತೆ, ಕನ್ನಡ ಭಾಷೆಯ ಜೊತೆ ನಿಕಟ ಸಂಪರ್ಕ ಹೊಂದಿದ್ದಾರೆ. ಕನ್ನಡ ಸಂಘಗಳಲ್ಲಿ ವಿವಿಧ ಸ್ತರಗಳಲ್ಲಿ ಕಾರ್ಯಶೀಲರಾಗಿದ್ದಾರೆ. ಆಕಾಶವಾಣಿಯಲ್ಲಿ, ಪತ್ರಿಕೆಗಳಲ್ಲಿ, ಅನುವಾದಕಿಯರಾಗಿ ದುಡಿಯುತ್ತಿದ್ದಾರೆ. ಯಕ್ಷಗಾನದ ಭಾಗವತಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಒಂದಿಬ್ಬರು ಮಹಿಳೆಯರ ಹೊರತಾಗಿ ಉಳಿದ ಎಲ್ಲರಿಗೂ ತಾವು ಇದುವರೆಗೆ ನಡೆದು ಬಂದ ದಾರಿಯ ಬಗ್ಗೆ ತೃಪ್ತಿಯಿದೆ ಸಂತೋಷವಿದೆ. ಎಲ್ಲರಲ್ಲೂ ಆತ್ಮ ವಿಶ್ವಾಸವಿದೆ.

ಇಲ್ಲಿನ ಲೇಖಕಿಯರಲ್ಲಿ ಸುಮಾರು ಹತ್ತು ಹನ್ನೆರಡು ಜನ ಬಹಳ ವರ್ಷದ ನಂತರ ಮುಂಬಯಿ ವಿಶ್ವವಿದ್ಯಾಲಯದಿಂದ ಓದು ಮುಂದುವರಿಸಿ ಕನ್ನಡ, ಎಂ.ಎ, ಎಂ.ಫಿಲ್ ಮತ್ತು ಡಾಕ್ಟರೇಟ್ ಪದವಿಯನ್ನು ಗಳಿಸಿದ್ದಾರೆ. ಬಹಳ ವರ್ಷಗಳ ನಂತರ ತಮ್ಮ ಓದು ಮುಂದುವರಿಸಲು ಸಾಧ್ಯ ಮಾಡಿಕೊಟ್ಟ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಡಾ.ತಾಳ್ತಜೆ ವಸಂತ ಕುಮಾರ್, ಡಾ. ಜಿ. ಎನ್. ಉಪಾಧ್ಯ, ಡಾ. ರಘುನಾಥ್, ಡಾ. ಗಿರಿಜಾ ಶಾಸ್ತ್ರಿ ಮುಂತಾದವರ ನಿರಂತರ ಪ್ರೋತ್ಸಾಹವನ್ನು ಪ್ರೀತಿಯಿಂದ ಸ್ಮರಿಸಿದ್ದಾರೆ. ಡಾ. ವಾಣಿ ಉಚ್ಚಿಲ್‌ಕರ್ ಅವರು ತಮ್ಮ ಸಂಸಾರ ತಾಪತ್ರಯದ ನಡುವೆಯೂ ತಮ್ಮ "ಬೋವಿ ಸಮಾಜ" ದ ಕುರಿತು ಸಂಶೋಧನೆ ಮಾಡಲು ದಕ್ಷಿಣ ಭಾರತದ ಎಲ್ಲೆಡೆ ಸಂಚರಿಸಿ ವಿಷಯ ಕಲೆ ಹಾಕಿದ್ದರ ಬಗ್ಗೆ ವಿಸ್ತೃತವಾಗಿ ಬರೆದಿದ್ದಾರೆ. ಅಂತ್ಯದಲ್ಲಿ "ನಾವು ನಮ್ಮನ್ನು ಬೆಳೆಸಿಕೊಳ್ಳಬೇಕಾದರೆ ನಾವು ಬಹಳಷ್ಟು ತ್ಯಾಗ ಮಾಡಬೇಕು. ಒಳಿತೋ ಕೆಡುಕೋ ಬೇರೆಯವರಿಂದ ಕೇಳಬೇಕು. ಆಗ ನಾವು ಆತ್ಮಸಂವರ್ಧನೆ ಮಾಡಿಕೊಳ್ಳಬಹುದು. ಏನನ್ನೂ ಸಾಧಿಸಬಹುದು ಅಂದಿದ್ದಾರೆ. ಜೀವನದಲ್ಲಿ ಏನನ್ನಾದರೂ ಸಾಧಿಸಬೇಕಿದ್ದರೆ ಈ ಮಾತು ಎಲ್ಲರಿಗೂ ಅನ್ವಯಿಸುತ್ತದೆ.

ಚಿಕ್ಕಂದಿನಲ್ಲೇ ಸಾಹಿತ್ಯದಲ್ಲಿ ಅಭಿರುಚಿ ಹೊಂದಿದ್ದ ಲೇಖಕಿಯರು ತಮ್ಮ ಶಾಲಾ ಕಾಲೇಜಿನ ದಿನಗಳಲ್ಲೂ ಕತೆ, ಕವಿತೆಯನ್ನು ಬರೆಯಲು ಪ್ರಾರಂಭಿಸಿದರು. ಮುಂದೆ ಮುಂಬೈನ ಸಾರಸ್ವತ ಲೋಕ ಈ ಪ್ರತಿಭೆಗಳನ್ನು ಗುರುತಿಸಿ ಅವರು ಬೆಳೆದು ಹೆಮ್ಮರವಾಗಲು ನೀರೆರೆದು ಪೋಷಿಸಿತು. ಶ್ರೀಮತಿ ಮಿತ್ರಾ ವೆಂಕಟ್ರಾಜ್, ಶ್ಯಾಮಲಾ ಮಾಧವ, ಡಾ. ಸುನೀತಾ ಶೆಟ್ಟಿ, ಡಾ. ಗಿರಿಜಾ ಶಾಸ್ತ್ರಿ ಇವರುಗಳು ಈಗ ಕರ್ನಾಟಕದಾದ್ಯಂತ ಪರಿಚಿತರು. ಅನಿತಾ ಪೂಜಾರಿ, ಶಾರದಾ ಅಂಚನ್, ಜಿ. ಪಿ. ಕುಸುಮಾ ಮುಂತಾದ ಕಿರಿಯ ಲೇಖಕಿಯರನ್ನು ಮುಂಬೈ ಸಾರಸ್ವತ ಲೋಕ ತುಂಬು ಹೃದಯದಿಂದ ಸ್ವಾಗತಿಸುತ್ತಿದೆ, ಪ್ರೋತ್ಸಾಹಿಸುತ್ತಿದೆ. ಮಿತ್ರಾರವರು ತಮ್ಮ ಜೀವನದಲ್ಲಿ ಕಂಡ ಪಾತ್ರಗಳನ್ನು ತಮ್ಮ ಕತೆಗಳಲ್ಲಿ ಓದುಗರ ಮುಂದೆ ತೆರೆದಿಟ್ಟಿದ್ದಾರೆ. ಊರಿನ ನೆನಪುಗಳು ತಮ್ಮ ಕವಿತೆಯ ಸೃಷ್ಟಿಗೆ ನಾಂದಿಯಾಯಿತು ಎಂದಿದ್ದಾರೆ ಸುನೀತಾ ಶೆಟ್ಟಿಯವರು.

ಕನ್ನಡ ಸಂಘ ಸಂಸ್ಥೆಗಳ ಸಂಚಾಲಕರಾದ ರವಿ ರಾ. ಅಂಚನ್, ಭರತ್ ಕುಮಾರ್ ಪೊಲಿಪು, ಜಿ. ಡಿ. ಜೋಶಿ, ಸುನೀತಾ ಶೆಟ್ಟಿ, ಸುನೀತಾ ಉದ್ಯಾವರ್ ಮುಂತಾದವರು ಮಹಿಳೆಯರು ಸಂಘದ ಕಾರ್ಯಗಳಲ್ಲಿ ಸಕ್ರಿಯವಾಗಿ

ತೊಡಗಿಕೊಳ್ಳಲು ಪ್ರೋತ್ಸಾಹಿಸಿ ಬೆಂಬಲಿಸಿದ್ದಾರೆ.

ಹಚ್ಚಿಟ್ಟ ಹಣತೆಯ ಮೂವತ್ತಮೂರು ಮಹಿಳೆಯರ ಬದುಕಿನ ಬಗ್ಗೆ ಓದಿದಾಗ ಅನ್ನಿಸುವುದೇನೆಂದರೆ ಮುಂಬಯಿ ನಗರ ಈ ಎಲ್ಲಾ ಮಹಿಳೆಯರ ಬದುಕನ್ನು ರೂಪಿಸುವುದರಲ್ಲಿ ಮಹತ್ತರ ಪಾತ್ರ ಹೊಂದಿದೆ. ಪ್ರತಿಯೊಬ್ಬ ಮಹಿಳೆಯೂ ಬಿಚ್ಚು ಮನಸ್ಸಿನಿಂದ ತಮ್ಮ ಆತ್ಮ ವೃತ್ತಾಂತವನ್ನು ತೆರೆದಿಟ್ಟಿದ್ದಾರೆ. ಯಾರ ಬರಹದಲ್ಲೂ ಕೃತಕತೆ ಇಲ್ಲ, ಆಡಂಬರವಿಲ್ಲ. ಸರಳತೆಯಿಂದ ತಮ್ಮ ಬದುಕನ್ನು ನಿರೂಪಿಸಿದ್ದಾರೆ. ಪ್ರತಿಯೊಬ್ಬರ ಜೀವನವೂ ಒಂದು ಕತೆ, ನೈಜ ಕತೆ. ತಮ್ಮ ದುಃಖ ದುಗುಡಗಳನ್ನು ಹೇಳಿಕೊಳ್ಳುವುದರಲ್ಲಿ ಯಾರಿಗೂ ಹಿಂಜರಿಕೆಯಿಲ್ಲ. ಹಾಗಾಗಿ ಇಲ್ಲಿನ ಬರಹಗಳು, ಲೇಖಕಿಯರು ಆಪ್ತರೆನಿಸುತ್ತಾರೆ. ತಮ್ಮ ಜೀವನದ ಬಗ್ಗೆ ಬರೆಯಲು ಅವಕಾಶ ಸಿಕ್ಕಿದ್ದಕ್ಕೆ ಎಲ್ಲರಿಗೂ "ಸೃಜನಾ"ದ ಬಗ್ಗೆ ಕೃತಜ್ಞತೆಯಿದೆ.

ಈಗಾಗಲೇ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಲೇಖಕಿಯರ ನಿರೂಪಣೆಗಳು ಉತ್ಕೃಷ್ಟವಾಗಿದೆ. ಬಹಳಷ್ಟು ಮಂದಿಗೆ ಇನ್ನೂ ಬೇಕಷ್ಟು ಕನಸುಗಳಿವೆ. ಸುನೀತಾ ಶೆಟ್ಟಿಯವರು ತೃಪ್ತಿಯಿಂದ "ಈಗ ಸಂಜೆಯಯಾಗಿದೆ ಮತ್ತೆ ಕನಸುಗಳಿಲ್ಲ" ಎಂದಿದ್ದಾರೆ.

ಮಹಿಳೆಯರು ಯಾವುದೇ ಸಂಕೋಚವಿಲ್ಲದೆ ತಮ್ಮ ಜೀವನವನ್ನು ತೆರೆದಿಟ್ಟಿರುವುದೇ ಒಂದು ದಿಟ್ಟ ಹೆಜ್ಜೆ. ಸಾಮಾನ್ಯ ಗೃಹಿಣಿಯರಿಗೆ ಈ ಅವಕಾಶವನ್ನು ಒದಗಿಸಿರುವ 'ಸೃಜನಾ'ದ ಈ ಕಾರ್ಯ ನಿಜಕ್ಕೂ ಶ್ಲಾಘನೀಯ.

ಚರ್ವಿತ ಚರ್ವಣ

## ದಿಕ್ಸೂಚಿ

ಪಶ್ಚಿಮದ ಬಗ್ಗೆ ಪೂರ್ವಾಗ್ರಹ ಬೇಡ..
ದಕ್ಷಿಣ ಉತ್ತರೋತ್ತರವಾಗಲಿ
ಅಧಸ್ತ ಊರ್ಧ್ವಮುಖಿಯಾಗಲಿ

ಗೋಲು ಗೋಳದಿ ಗೋಳು ಬೇಡ...
ಆಗ್ನೇಯ-ಅಗ್ನಿಗೆ ವಾಯುವ್ಯ-ವಾಯು ಮಾರಕವಾಗದಿರಲಿ
ನೈರುತ್ಯದ ಅಸುರನಿಗೆ ಈಶಾನ್ಯದ ಸುರ ದಿಕ್ಕುದೋರಲಿ


ಅಷ್ಟದಿಕ್ಪಾಲಕ, ನೀ ದಿಕ್ಕು ತಪ್ಪಬೇಡ..
ವರುಣ-ಕರುಣೆ ಇಂದ್ರನ ಮೇಲೂ ಇರಲಿ
ಕುಬೇರನಿಗೂ ಯಮದಂಡಕಾಲ ತಪ್ಪದಿರಲಿ

ಚಕ್ರ-ಪದ್ಮದ ಗ್ರಹಗತಿಗೆ ಗ್ರಹಣ ಬೇಡ..
ಚಂದ್ರನಿಗೆ ಸೂರ್ಯೋದಯವಾಗುತ್ತಿರಲಿ
ಬ್ರಹಸ್ಪತಿಗೂ ಸದಾ ಶುಕ್ರದೆಸೆಯಿರಲಿ

ಮನುಜಾ, ನೀ ಭ್ರಮಿಸಬೇಡ..
ಪರಿಭ್ರಮಿಸುತ್ತಿರು;
ಧಿಕ್ಕರಿಸು ದಿಕ್ಕನ್ನು..
ಪರಿಧಿಯಲ್ಲಿರು.
ದಿಕ್ಕುಗಳ ದಿಕ್ಕು ಹಿಡಿಯ ಹೋಗಿ

ದಿಕ್ಕುಗೆಡದಿರಲಿ
ದೆಸೆ ಮೀರದಿರಲಿ..
ಈ ನನ್ನ ಮತ್ತೊಂದು..

ಚರ್ವಿತ ಚರ್ವಣ



– ಮನೋಹರ್ ನಾಯಕ್
(9820267025)
lingoindia@gmail.com

ಜೀವಿ ವಚನಗಳು

## ಸತ್ಯಕ್ಕೆ ಹಲವು ಮುಖ

1

ಜನನ-ಮರಣ ಒಂದು ಚಕ್ರ, ಬಿಡಿಸಿಕೊಂಡವನೆ ಮುಕ್ತ.
ಮತ್ತೆ ಮತ್ತೆ ಹುಟ್ಟು ಇದೆ; ನಂಬಿದರೆ ನಂಬಿ, ನಂಬದಿದ್ದರೆ ಬಿಡಿ.
ಪುನರ್ಜನ್ಮ ಇದು ಜೀವಗಳ ಹಣೆಬರಹ, ಅಳಿಸಲಾಗದ ಸತ್ಯ.
ಅದನ್ನು ನೀವು ಸತ್ಯವೆಂದರೂ ಸತ್ಯ, ಮಿಥ್ಯೆ ಎಂದರೂ ಸತ್ಯ.
ಬುದ್ಧನಿಗಿತ್ತು ನೂರು ಜನ್ಮಗಳ ಸ್ಮರಣೆ, ನಮಗೆ ಇಲ್ಲ, ಇದೂ ಸತ್ಯ.

2


'ಬಹೂನಿ ಮೇ ವ್ಯತೀತಾನಿ ಜನ್ಮಾನಿ ತವಚಾರ್ಜುನ' ಎಂದ ಕೃಷ್ಣ.
ನರನದು ಮರುಹುಟ್ಟು, ಆದರೆ ನಾರಾಯಣನದು ಪುನರಾವತಾರ.
ಜನುಮಮರಣದ ಆಲೆ, ಎಲ್ಲದಕ್ಕೂ ಅವನೇ ಸೂತ್ರಧಾರ.
ಮತ್ತೆಮತ್ತೆ ಸಾಯುವ ಶರೀರ, ಬದಲುಮಾಡುವ ಹಳೆಯ ಬಟ್ಟೆ.
ಉಟ್ಟು ಹರಿಯುವ ದೇಹಕಾಗಿ ಯಾಕೆ ಶೋಕ, ಯಾಕೆ ಮೋಹ?

3

ಆದಿ ಗೊತ್ತಿಲ್ಲ, ಅಂತ ಗೊತ್ತಿಲ್ಲ; ಮಧ್ಯದಲ್ಲಿ ಇರುವದೇ ಜೀವನ.
'ನಾ ತೊಟ್ಟ ದೇಹಗಳ ಲೆಕ್ಕ/ ಇಡುವವರ ಸೊಕ್ಕ/ ಯಮss ನೋಡಿ ನಕ್ಕ'
ಎಂದು ಹಾಡಿದರು ಬೇಂದ್ರೆ: 'ಮುಗಿಯದ ಕಾಳಕ್ಕ/ ಜನುಮಗಳ ಮ್ಯಾಳಕ್ಕ/
ಕುಣಿಯೋಣು ಬಾ' ಎಂದು ಸಖಿಗೆ ಕರೆದ ವರಕವಿ ದತ್ತ. ನಿನ್ನೆಗಳ ಮರೆತು,
ನಾಳೆಗಳ ತೊರೆದು, ಇಂದು ಇರುವುದೇ ನಿಜ ಬಾಳುವೆಯ ಗುಟ್ಟು.

4

'ಹುಟ್ಟದೇ ಇರುವವರು ಸಾಯುವುದೆ ಇಲ್ಲ, ಬರೆಯದ ಪುಸ್ತಕವ ಓದಿದವರಿಲ್ಲ.'
'ಜಾತಸ್ಯ ಮರಣಂ ಧ್ರುವಂ'; ಹುಟ್ಟು ಎಷ್ಟು ಸತ್ಯವೋ ಸಾವೂ ಅಷ್ಟೇ ಸತ್ಯ.
ಮಧ್ಯದಲ್ಲಿರುವ ಬಾಳು ಕೂಡ ಸತ್ಯ, ಮಿಥ್ಯೆ ಎಲ್ಲಿದೆ ಹುಡುಕಲು?
'ಸೋಹಂ' ಎಂದರೆ ಅಹಂಕಾರ, 'ಕೋಹಂ' ಎಂದರೆ ಸಂಶಯ, 'ದಾಸೋಹಂ',
'ಶಿಷ್ಯಸ್ತೇಹಂ' ಅನ್ನುವುದೇ ಕ್ಷೇಮ; ಮಾತುಕೊಡು, 'ಕರಿಷ್ಯೇ ವಚನಂ ತವ' ಎಂದು.



_ಡಾ। 'ಜೀವಿ' ಕುಲಕರ್ಣಿ
**(M: 9324242172)**

(ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಅಧ್ಯಾಯ ಐದರಿಂದ ಸ್ಫುರಿಸಿದ್ದು)

## ದೇವನೇ ನನ್ನ.....




ದೇವನೇ ನನ್ನ....
ಭೋರ್ಗರೆವ ಸಮುದ್ರವಾಗಿ ಮಾಡು
ಹರಿವ ತೊರೆಯಾದರೂ ಮಾಡು
ತುಂತುರು ಹನಿಯನ್ನಾದರೂ ಮಾಡು||
ದೇವನೇ ನನ್ನ....
ಬೆಳದಿಂಗಳ ಚಂದಿರನಾಗಿ ಮಾಡು
ಮಿನುಗುವ ನಕ್ಷತ್ರವಾದರೂ ಮಾಡು
ಆಗಸದ ಚುಕ್ಕಿಯನ್ನಾದರೂ ಮಾಡು||
ದೇವನೇ ನನ್ನ....
ಹಾರುವ ಹಕ್ಕಿಯಾಗಿ ಮಾಡು
ಪಾತರಗಿತ್ತಿ, ಪತಂಗವಾದರೂ ಮಾಡು
ಕ್ರಿಮಿಕೀಟ, ಎರೆಹುಳುವನ್ನಾದರೂ ಮಾಡು||
ದೇವನೇ ನನ್ನ....
ಪೂಜೆಗರ್ಪಿಸುವ ಪರಿಮಳ ಪುಷ್ಪವಾಗಿ ಮಾಡು
ಫಲರಹಿತ ಬಳ್ಳಿಗೊಂದು ಕುಸುಮವಾದರೂ ಮಾಡು
ಸಂಜೆಯಲರಳುವ ಹೂ ಮೊಗ್ಗನ್ನಾದರೂ ಮಾಡು||
ದೇವನೇ ನನ್ನ....
ಉತ್ಕೃಷ್ಟ ಜೀವರಾಶಿಯಾಗಿ ಮಾಡು
ಮನುಕುಲದ ಸಂತತಿಯಾದರೂ ಮಾಡು
ಸಮಸ್ತ ಜೀವರಾಶಿಯಲೊಂದು ಜೀವಿಯನ್ನಾದರೂ ಮಾಡು||

***- ಶ್ರೀಮತಿ ಶಾರದಾ ಎ. ಅಂಚನ್***

---

## ನನ್ನಜ್ಜ




ಅವಮಾನದ ಬೆಟ್ಟದೊಳಗೆ
ಕಾಲವೆಂಬ ಉಳಿಯ ಹಿಡಿದು
ಬಸವಳಿಯದೆ ಬೆಂಡರಿಯದೆ
ಶತಮಾನಗಳನ್ನು ಗಳಿಗೆ ಮಾಡಿ
ಮೂರ್ತಿ ಕೆತ್ತಿ ಜೋಡು ಗುಂಡಿಗೆ ಒತ್ತಿ
ಊರೊಳಗೆ ಬಿಟ್ಟ ಬೆಳ್ಳಿ ಗಡ್ಡದ ನನ್ನಜ್ಜ
ಅಹಂಕಾರದ ಯಜ್ಞಕುಂಡದೊಳಗೆ
ಹಾಲಿನಂತಹ ಗುಣಗಳೊತ್ತ
ನೆಲಬಣ್ಣದ ಮುಗ್ಧ ಮುದುಕ
ನೊಂದು ಬೆಂದು ನಾಕ ಕಟ್ಟಿ
ಗಾಳಿಮನೆಯ ಕತ್ತಲೊಳಗೆ
ತಾಳ್ಮೆ ಅನ್ನವನುಂಡು ತುಳುಕದ ನನ್ನಜ್ಜ
ಪಾಳು ಬಿದ್ದ ಕೇರಿಯಲ್ಲಿ ನಾಳೆಯ ಬೆಳಕಿಗಾಗಿ
ಇನ್ನೂ ಬದುಕಿದ್ದಾನೆ
ಇತಿಹಾಸದ ಕೊಂಡಿ ಹಿಡಿದು

***– ಡಾ. ಮರಿಯಪ್ಪ ನಾಟೇಕರ್***

---

# ವಿದ್ವಾನ್ ಬಿಡಾರಂ ಕೃಷ್ಣಪ್ಪ (ಗಾಯನ ವಿದ್ವಾಂಸರು)

ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಒಂದು ಯಕ್ಷಗಾನ ತಂಡ ಮೈಸೂರಿಗೆ ಬಂದಿತು. ಅವರ ಪ್ರದರ್ಶನ ಕಂಡ ಮಹಾಸ್ವಾಮಿಗಳು ಅವರಲ್ಲಿ ಕೆಲವರನ್ನು ಮೈಸೂರಿನಲ್ಲೇ ಉಳಿಸಿಕೊಂಡು ಶಿವರಾಮಪೇಟೆಯಲ್ಲಿ ಅವರಿಗೆ 'ಬಿಡಾರ'ಗಳನ್ನು ಕಟ್ಟಿಸಿಕೊಟ್ಟರು. ಹೀಗೆ ಅಲ್ಲಿ ವಾಸಿಸುವವರಿಗೆ ಬಿಡಾರದವರೆಂದು ಹೆಸರು ಬಂದಿತು.



ಕ್ರಿ.ಶ.1866 ರ ಗೋಕುಲಾಷ್ಟಮಿಯ ದಿನದಂದು ಶ್ರೀಯುತರ ಜನನವಾಗಿ ಅವರಿಗೆ ಕೃಷ್ಣನೆಂದು ನಾಮಕರಣ ವಾಯಿತು. ಆದರೆ ಚಿಕ್ಕಂದಿನಲ್ಲೇ ತಂದೆಯುನ್ನು ಕಳೆದುಕೊಂಡ ಕೃಷ್ಣನ ಪೋಷಣೆ ಅವರ ತಾಯಿಯುದಾಯಿತು. ಬಡತನದಲ್ಲಿ ಬೆಳೆದ ಕೃಷ್ಣ ಮತ್ತು ಅವನ ಅಣ್ಣನಿಗೆ ಹರಿದಾಸರ ಕೃತಿಗಳೇ ಆಧಾರವಾಯಿತು. ಭಿಕ್ಷೆಗೆ ಹೋದ ಕೃಷ್ಣನಿಗೆ ಅಂದು ಭಿಕ್ಷೆ ಸಿಗದೆ ಕಂಗೆಟ್ಟಿದ್ದಾಗ ತಿಮ್ಮಯ್ಯನವರೆಂಬ ಸಾಹುಕಾರರ ಅನುಗ್ರಹಕ್ಕೆ ಪಾತ್ರನಾಗಿ ಕೃಷ್ಣಪ್ಪನವರು ಸಂಗೀತ ಕಲಿಯಲು ಅನುವು ದೊರಕಿತು. ಪ್ರಖ್ಯಾತ ನಾಮರಾಗಿದ್ದ ಕರೂರು ರಾಮಸ್ವಾಮಿಯವರಲ್ಲಿ ಸಂಗೀತ ಶಿಕ್ಷಣ. ಈ ಸಂಗೀತ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟ ಸಾಹುಕರ ತಿಮ್ಮಯ್ಯನವರೇ ಇವರ ಪೋಷಕರಾದರು. ಸಾಹುಕಾರ್ ತಿಮ್ಮಯ್ಯನವರ ಕೃಪಾಕಟಾಕ್ಷದಿಂದ ಸಂಗೀತ ಸರಸ್ವತಿ ಇವರಿಗೆ ಒಲಿದು 'ಕೃಷ್ಣ' ನೆಂಬುದು 'ಕೃಷ್ಣಪ್ಪ'ನೆಂಬುವಂತಾಯಿತು. ಜೊತೆಗೆ ಬಿಡಾರದಲ್ಲಿನ ವಾಸ 'ಬಿಡಾರಂ ಕೃಷ್ಣಪ್ಪ'ನವರಾದರು. ಸಾಹುಕಾರರ ಪ್ರಯತ್ನದಿಂದ ಅರಮನೆಯಲ್ಲಿ ವಿದ್ವಾಂಸರಾಗಿ ನೇಮಕಗೊಂಡರು. ಉತ್ತಮ ಗಾಯಕರಾಗಿದ್ದಂತೆಯೇ ಉತ್ತಮ ನಟನಾ ಕೌಶಲ್ಯವನ್ನು ಹೊಂದಿದ್ದ ಶ್ರೀಯುತರು ಮಹಾರಾಜರ ಕೃಪೆಗೆ ಪಾತ್ರರಾಗಿ 'ಗಾನವಿಶಾರದ'ರಾದರು. ಅಪಾರ ಸಾಧನೆಗೆ ಒಗ್ಗಿ ಹೋಗಿತ್ತು ಅವರ ದೇಹ. ಅರವತ್ತರ ಇಳಿವಯಸ್ಸಿನಲ್ಲಿಯೂ ಹತ್ತಾರು ಗಂಟೆ ಪಾಠ ಹೇಳುವ ಸಂಪ್ರದಾಯ ಇವರದ್ದಾಗಿದ್ದಿತು. ಕನ್ನಡ ಹರಿದಾಸ ಕೃತಿಗಳಿಗೆ ವಿಶಿಷ್ಠ ಸ್ಥಾನ ಕಲ್ಪಿಸಿಕೊಟ್ಟ ಹೆಗ್ಗಳಿಕೆ ಇವರದು. ಅವರು ಎಷ್ಟೇ ಪ್ರವೃದ್ಧಮಾನಕ್ಕೆ ಬಂದರೂ ಅವರ ಹೃದಯದಲ್ಲಿ ಹರಿದಾಸ ಕೃತಿಗಳಿಗೆ ವಿಶಿಷ್ಠ ಸ್ಥಾನ ನೀಡಿದ ಹೆಗ್ಗಳಿಕೆ ಶ್ರೀಯುತರದು.

ತೆಲುಗು ಕೃತಿಗಳ ರಚನೆಯುಲ್ಲಿ ಹೆಸರಾಂತರಾದ ಶ್ರೀ ತ್ಯಾಗರಾಜಸ್ವಾಮಿಗಳು, ಶ್ಯಾಮಾಶಾಸ್ತ್ರಿಗಳು, ಮುತ್ತುಸ್ವಾಮಿಗಳು ರಚಿಸಿರುವ ಕೃತಿಗಳ ಬಗ್ಗೆ ಅಪಾಅರ ಗೌರವವಿದ್ದರೂ ಇವರ ಹೆಚ್ಚಿನ ಒಲವು ಸಂಗೀತ ಪಿತಾಮಹ ಶ್ರೀ ಪುರಂದರದಾಸರ, ವ್ಯಾಸತೀರ್ಥರ, ವಾದಿರಾಜರ, ಕನಕದಾಸರಿಂದ ರಚಿತವಾದ ಕನ್ನಡ ಕೃತಿಗಳಿಗೇ. ಕನ್ನಡಕ್ಕಾಗಿ ವಿಶಿಷ್ಠ ಸೇವೆ ಸಲ್ಲಿಸಿದ ಈ ಮಹಾನ್ ಚೇತನ ದಿನಾಂಕ 29–03–1931 ರಂದು ವೈಕುಂಠವಾಸಿಯಾಯಿತು.

# ಬದುಕಿನೊಳಗೊಂದಾಗಿ ಬೆರೆತ ಮಂಕುತಿಮ್ಮನ ಕಗ್ಗದ ಸೊಬಗು



ಸುರೇಶ್ ಮಡಿಕೇರಿ

ತರಚುಗಾಯವ ಕೆರೆದು ಹುಣ್ಣನಾಗಿಪುದು ಕಪಿ
ಕೊರತೆಯೊಂದನು ನೀನು ನೆನೆನೆನೆದು ಕೆರಳಿ
ಧರೆ ಎಲ್ಲವನು ಶಪಿಸಿ ಮನನಿನರಕವ ನಿಲಿಸಿ
ನರಳುವುದು ಬದುಕೇನೋ? ಮಂಕುತಿಮ್ಮ

ಇದೇನೋ ಸೂರಿ ಏನೋ ಬಡಬಡಿಸ್ತಾ ಇದ್ದೀಯಾ? ಯಾರೀ ಮಂಕುತಿಮ್ಮ? ಎಂದು ಪ್ರಶ್ನಿಸಿದ ಸ್ನೇಹಿತನ ಮೇಲೆ ಕೋಪ ಬಂದರೂ ತೋರ್ಪಡಿಸಿಕೊಳ್ಳದೆ ಏನೂ ಇಲ್ಲ ಕಣೋ ಅದು ಡಿ.ವಿ.ಜಿ ಅವರ ಕಗ್ಗ ಎಂದೆ. ಹೌದಾ, ಏನಿದರ ಅರ್ಥ ಎಂದ ಅವನಿಗೆ ನನಗೆ ತಿಳಿದ ಮಟ್ಟಿಗೆ ವಿವರಿಸಿದೆ. ಮಂಗ ತನ್ನ ಮೈಮೇಲೆ ಸ್ವಲ್ಪ ಗಾಯವಾದರೂ ಅದನ್ನು ಕೆರೆದು ಕೆರೆದು ಹೇಗೆ ದೊಡ್ಡದು ಮಾಡುತ್ತದೆಯೋ ಹಾಗೆ ಮನುಷ್ಯರಾದ ನಾವು ನಮ್ಮ ಸಣ್ಣ ಸಣ್ಣ ದು:ಖ ನೋವನ್ನು ಮತ್ತೆ ಮತ್ತೆ ನೆನೆದು ನರಳುತ್ತೇವಲ್ಲ. ಅಂತಹ ಬದುಕಿನ ಬಗ್ಗೆ ಡಿ.ವಿ.ಜಿಯವರು ಪ್ರಶ್ನಿಸುತ್ತಾರೆ.

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು- ಮಂಕುತಿಮ್ಮ

ಜೀವನವನ್ನು ನಾವು ಬಂದ ಹಾಗೆ ಎದುರಿಸಬೇಕು. ಕಷ್ಟ ಸುಖ ಬಂದಾಗ ಅದನ್ನು ಸಮಾನವಾಗಿ ಸ್ವೀಕರಿಸಬೇಕು. ಬೆಟ್ಟದ ಕೆಳಗಿನ ಹುಲ್ಲಿನಂತೆ ವಿನಯ, ವಿಧೇಯತೆಯನ್ನು ಅಳವಡಿಸಿಕೊಂಡು ಮನೆಗೆ ಸುವಾಸನೆ ಬೀರುವ ಮಲ್ಲಿಗೆಯಂತೆ ಮೃದು ನಡೆ-ನುಡಿಯಿಂದ ಬಾಳಬೇಕು. ಜೀವನದಲ್ಲಿ ವಿಧಿ ನೀಡುವ ಕಷ್ಟಗಳೆಂಬ ಮಳೆಗೆ ಹೆದರದೆ. ವಿಚಲಿತನಾಗದೆ ಕಲ್ಲಿನಂತಿರಬೇಕು, ನೊಂದವರಿಗೆ, ಬಡವರಿಗೆ ಬೆಲ್ಲ ಸಕ್ಕರೆಯಂತೆ ಸಿಹಿಯಾಗಿ, ಪ್ರೀತಿಯನ್ನು ತೋರಬೇಕು. ಬಡವ-ಬಲ್ಲಿದರೆನ್ನದೆ ಎಲ್ಲರಲ್ಲಿ ಒಂದಾಗಿ ಬಾಳಬೇಕು ಎಂಬ ಜೀವನತತ್ವವನ್ನು ಡಿ.ವಿ.ಜಿ ಅವರು ಸಾರುತ್ತಾರೆ.

ಬದುಕಿನ ಬವಣೆಗಳನ್ನು ಧನಾತ್ಮಕವಾಗಿ ಸ್ವೀಕರಿಸಬೇಕೆಂದು ಸೂಚ್ಯವಾಗಿ ತಿಳಿಸುತ್ತಾರೆ. ಹೌದು ಸೂರಿ ನೀನು ಇಷ್ಟೆಲ್ಲ ಹೇಳಿದ ಮೇಲೆ ಶಾಲೆಯಲ್ಲಿ ಓದಿದ ಕಗ್ಗಗಳ ನೆನಪಾಯಿತು. ಹಾಗಿದ್ದರೆ ಅವರ ಬಗ್ಗೆ ನಿನಗೆ ಇನ್ನೇನು ಗೊತ್ತಿದೆ ಹೇಳು ನೋಡೋಣ ಎಂದೆ. ಇಲ್ಲಪ್ಪ ಅದೆಲ್ಲ ಮರೆತು ಹೋಗಿದೆ. ಈಗೆಲ್ಲಿ ನೆನಪು, ನಿನಗೆ ಗೊತ್ತಿರುವುದನ್ನು ಹೇಳು ಅಂದ ನನ್ನ ಸ್ನೇಹಿತ. ನನಗೂ ಡಿ.ವಿ.ಜಿ ಅವರೆಂದರೆ ಬಹಳ ಅಚ್ಚುಮೆಚ್ಚು. ಅವರ ಕಗ್ಗವೆಂದರೆ ಅತಿ ಪ್ರೀತಿ. ಅವರ ಬಗ್ಗೆ ಹೇಳಲು ತುಂಬಾ ವಿಷಯಗಳಿವೆ. ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ಹೇಳುತ್ತೇನೆ ಕೇಳು.

ಡಿ.ವಿ.ಜಿ ಅವರ ಪೂರ್ಣ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ. 1887ರ ಮಾರ್ಚ್ 17ರಂದು ಈಗಿನ ಕೋಲಾರ ಜಿಲ್ಲೆಯ ಮುಳಿಬಾಗಿಲು ತಾಲೂಕಿ( ಅಗಿನ ಮೈಸೂರು ರಾಜ್ಯ) ನಲ್ಲಿ ಅವರ ಜನನವಾಯಿತು. ಮೈಸೂರಿನ ಮಹಾರಾಜ ಪ್ರೌಢ ಶಾಲೆಯಲ್ಲಿ ಶಿಕ್ಷಣ ಪಡೆದರು. ಮೆಟ್ರಿಕ್ ಪರೀಕ್ಷೆಯಲ್ಲಿ ಅವರು ತೇರ್ಗಡೆಯಾಗಲಿಲ್ಲ. ಮುಂದೆ ಶಾಲೆಯಲ್ಲಿ ತನ್ನ ಶಿಕ್ಷಣವನ್ನು ಮುಂದುವರಿಸಲಿಲ್ಲ. ಆದರೆ ಅವರು ಎಂದಿಗೂ ನಿರಾಶವಾದಿಯಲ್ಲ. ಅವರು ಮುಂದೆ ಕಠಿಣ ಪರಿಶ್ರಮದಿಂದ ಖಾಸಗಿಯಾಯಾಗಿ ವೇದ, ವೇದಾಂತ, ಸಂಸ್ಕೃತ, ರಾಮಾಯಣ, ಮಹಾಭಾರತ, ರಾಜ್ಯಶಾಸ್ತ್ರ, ತತ್ವಶಾಸ್ತ್ರಗಳೊಂದಿಗೆ ದೇಶದ ಇತರ ಭಾಷೆಗಳನ್ನು ಕಲಿತುಕೊಂಡರು. ಇದರಿಂದ ಅಪಾರವಾದ ಜ್ಞಾನವನ್ನು ಗಳಿಸಿಕೊಂಡರು. ಆದ್ದರಿಂದಲೇ ಡಿ.ವಿ.ಜಿಯವರು ಅಧ್ಯಯನಶೀಲ ಮನಸ್ಸು ನಮ್ಮದಾಗಬೇಕೆಂದು ಹೇಳುತ್ತಿದ್ದರು. ಹೆಚ್ಚು ಹೆಚ್ಚು ಪುಸ್ತಕಗಳನ್ನು ಓದುವಂತೆ ಅವರು ಸಲಹೆ ನೀಡುತ್ತಿದ್ದರು. ನಂತರ ಇವರು ಶಿಕ್ಷಕರಾಗಿ, ತದನಂತರ ಕೋಲಾರ ಚಿನ್ನದ ಗಣಿಯಲ್ಲಿ ಜೀವನ ನಿರ್ವಹಣೆಗಾಗಿ ಕೆಲಸ ಮಾಡುತ್ತಿದ್ದರು. ಬೆಂಗಳೂರಿಗೆ ಬಂದ ಡಿ.ವಿ.ಜಿಯವರು 'ಸೂರ್ಯೋದಯ' ಪತ್ರಿಕೆಯಲ್ಲಿ ವರದಿಗಾರರಾಗಿ ಕಾರ್ಯ ನಿರ್ವಹಿಸಿದರು. ಆದರೆ ಕಾರಣಾಂತರದಿಂದ ಆ ಪತ್ರಿಕೆ ಮುಚ್ಚಿಹೋಯಿತು. ಹಲವಾರು ಪತ್ರಿಕೆಗಳಿಗೆ ಅವರು ಆಗ ಲೇಖನಗಳನ್ನು ಬರೆಯುತ್ತಿದ್ದರು. ಆಂಗ್ಲ ಪತ್ರಿಕೆಗೂ ಲೇಖನಗಳನ್ನು ಬರೆದರು. 'ಮೈಸೂರು ಟೈಮ್ಸ್' ಎಂಬ ಆಂಗ್ಲ ಪತ್ರಿಕೆಯಲ್ಲಿ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ದಿವಾನ್ ರಂಗಾಚಾರ್ಯರ ಬಗ್ಗೆ ಅವರು ಬರೆದ ಲೇಖನದಿಂದ ಅವರ ಜೀವನಕ್ಕೆ ಹೊಸ ತಿರುವು ದೊರೆಯಿತು. ನಂತರ ಬರವಣಿಗೆಯನ್ನು ಕೇವಲ ಹವ್ಯಾಸವನ್ನಾಗಿ ಸ್ವೀಕರಿಸದೆ ವೃತ್ತಿಯನ್ನಾಗಿಸಿಕೊಂಡು ಸತತವಾಗಿ ಅಧ್ಯಯನ, ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿಸಿಕೊಂಡರು. ಅನುವಾದ, ಪ್ರಬಂಧ, ರಾಜಕೀಯ ವಿಶ್ಲೇಷಣೆ, ತತ್ವಶಾಸ್ತ್ರ, ಧಾರ್ಮಿಕ ವಿಚಾರಗಳು, ಮಕ್ಕಳ ಕಥೆ, ಕಾವ್ಯ, ನಾಟಕ, ಧರ್ಮಜಿಜ್ಞಾಸೆ ಮೊದಲಾದ ವಿಷಯಗಳಲ್ಲಿ ಅಧ್ಯಯನಪೂರ್ಣ ಬರವಣಿಗೆಗಳು, ಪುಸ್ತಕಗಳು ಪ್ರಕಟವಾದವು. 'ಬಾಳಿಗೊಂದು ನಂಬಿಕೆ, ದೇವರು, ರಾಜ್ಯಶಾಸ್ತ್ರ, ಮ್ಯಾಕ್‌ಬೆತ್, ಭಗವದ್ಗೀತಾ ತಾತ್ಪರ್ಯ, ಈಸೋಪನಿಷತ್, ಮಂಕುತಿಮ್ಮನ ಕಗ್ಗ, ಮರುಳಮುನಿಯನ ಕಗ್ಗ, ಓಮರನ ಹೊಸಗೆ ಮುಂತಾದವು ಪ್ರಮುಖ ಕೃತಿಗಳು. ಮಂಕುತಿಮ್ಮನ ಕಗ್ಗ ಅವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟಿತು. ಇಂತಹ ಮನಸ್ಸನ್ನು ಮುಟ್ಟುವ, ಬುದ್ದಿಯನ್ನು ತಟ್ಟುವ, ಹೃದಯದಲ್ಲಿ ಗಟ್ಟಿಯಾಗಿ ನೆಲೆ ನಿಲ್ಲುವ ಶಕ್ತಿಯನ್ನೊಳಗೊಂಡ ಕಗ್ಗ ರಚಿಸಿದ ಕೀರ್ತಿ ಡಿ.ವಿ.ಜಿ ಅವರದ್ದು. ತಾವು ನಂಬಿದ್ದನ್ನು ಅನುಭವಿಸಿದ್ದನ್ನು ಹಾಗೂ ಓದಿ ಕೇಳಿ, ತಿಳಿದಿದ್ದನ್ನು ತಿಳಿಯಾಗಿ ಎಲ್ಲರಿಗೂ ತಿಳಿಯುವಂತೆ ತಿಳಿಸಿದ ಅವರ ಕಗ್ಗಗಳು ವಿಶಿಷ್ಟವಾದದ್ದು. ಇವುಗಳ ತುಂಬ ಸ್ಫುರಿಸುವ ಅಧ್ಯಾತ್ಮಿಕ ಹಾಗೂ ಅನುಭಾವಗಳ ಸಂಚಾರ ನೇರವಾಗಿ ಮನಸ್ಸಿಗೆ ತಟ್ಟುತ್ತವೆ. ಆದ್ದರಿಂದಲೇ ಅದು ಓದುಗನಿಗೆ ಇಷ್ಟವಾಗುತ್ತದೆ. ಇದು ಅವರ ಸಾಹಿತ್ಯ ಪರಿಚಾರಿಕೆಯಾದರೆ ಅವರೊಬ್ಬ ಉತ್ತಮ ಸಮಾಜಸೇವಕರೂ ಆಗಿದ್ದರು ಎನ್ನುವುದು ಬಹುಶ: ನಿನಗೆ ಗೊತ್ತಿರಲಿಕ್ಕಿಲ್ಲ. ಅವರು 1935ರಲ್ಲಿ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಯನ್ನು ಆರಂಭಿಸಿದರು. ತಮ್ಮ ಪುಸ್ತಕದಿಂದ ಬಂದ ಆದಾಯ, ತಮಗೆ ದೊರೆತ ಪುರಸ್ಕಾರದ ಹಣ, ಜೊತೆಗೆ ತಮ್ಮ ಪುಸ್ತಕದ ಹಕ್ಕನ್ನು ತನ್ನ ಪರಿವಾರಕ್ಕೆ ನೀಡದೆ ಅವರು ಈ ಸಂಸ್ಥೆಗೆ ನೀಡಿದ್ದು ಸಣ್ಣ ಮಾತಲ್ಲ. ಹೌದೇನು? ತನ್ನ ಸರ್ವಸ್ವವನ್ನು ಧಾರೆಯೆರೆದ ಇವರನ್ನು ಸರಕಾರ ಗೌರವಿಸಲಿಲ್ಲವೇ? ಎಂದು ನನ್ನ ಸ್ನೇಹಿತ ಮತ್ತೆ ಮಧ್ಯೆ ಬಾಯಿ ಹಾಕಿದ. ನೋಡು ಗೆಳೆಯ ಡಿ.ವಿ.ಜಿ ಅವರು ಎಂದಿಗೂ ಪ್ರಶಸ್ತಿ, ಪುರಸ್ಕಾರದ ಹಿಂದೆ ಬಿದ್ದವರಲ್ಲ. ಅವರ ಮುಖ್ಯ ಧ್ಯೇಯ ಉನ್ನತ ಜೀವನಾದರ್ಶಗಳೇ ಆಗಿತ್ತು. ಅದನ್ನೇ ಅವರು ತಮ್ಮ ಕಗ್ಗದಲ್ಲಿ ಪಡಿಮೂಡಿಸಿದ್ದಾರೆ. ಬದುಕಿನಲ್ಲಿ ಉಲ್ಲಾಸ ತುಂಬುವುದು, ಕಷ್ಟದಲ್ಲಿರುವವರಿಗೆ ಸಾಂತ್ವನ ಹೇಳುವುದು, ಧೈರ್ಯ ತುಂಬುವುದು ಅವರ ಕಗ್ಗದ ಮೂಲ ಉದ್ದೇಶವಾಗಿತ್ತು. ಅದನ್ನು ಜನರು ಪ್ರೀತಿಯಿಂದ ಸ್ವೀಕರಿಸಿದರು ಕೂಡಾ. ಆದ್ದರಿಂದಲೇ ಅವರನ್ನು 'ಆಧುನಿಕ ಬೃಹ್ಮ' ಎಂದು ಕರೆದರು.

ಡಿ.ವಿ.ಜಿ ಅವರು 1932ರಲ್ಲಿ ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 1961ರಲ್ಲಿ ಮೈಸೂರು ವಿಶ್ವವಿದ್ಯಾಲಯ ಡಿ.ವಿ.ಜಿ ಅವರ ಸಾಹಿತ್ಯ ಮತ್ತು ಪತ್ರಿಕೋದ್ಯಮದಲ್ಲಿನ ವಿಶಿಷ್ಟ ಸೇವೆಯನ್ನು ಗುರುತಿಸಿ ಡಿ.ಲಿಟ್ ಪದವಿ ನೀಡಿ ಗೌರವಿಸಿತು. 1967ರಲ್ಲಿ ಶ್ರೀಮದ್ಭಾಗವತಾ ಗೀತಾ ತಾತ್ಪರ್ಯ ಎಂಬ ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ

ಗೌರವಿಸಿತು. 1974ರಲ್ಲಿ ಭಾರತ ಸರಕಾರ ಪದ್ಮಭೂಷಣ ಪ್ರಸಸ್ತಿ ನೀಡಿ ಗೌರವಿಸಿತು. 1988ರಲ್ಲಿ ಡಿ.ವಿ.ಜಿ ಅವರ ಅಂಚೆಚೀಟಿಯೂ ಬಿಡುಗಡೆಗೊಂಡಿತು. ಬ್ಯೂಗಲ್ ಪಾರ್ಕಲ್ಲಿ ಅವರ ಪ್ರತಿಮೆಯೂ ಇದೆ. 1970ರಲ್ಲಿ ಆಗಿನ ಕರ್ನಾಟಕದ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು 90,000ರೂ ನಗದು ಬಹುಮಾನವನ್ನು ಅವರ ಸಾಹಿತ್ಯ ಸೇವೆಗೆ ಪುರಸ್ಕಾರವಾಗಿ ನೀಡಿದ್ದರು. ಆದರೆ ಉದಾರಿಯಾದ ಡಿ.ವಿ.ಜಿಯವರು ಆ ಮೊತ್ತವನ್ನು ತಾನು ಸ್ಥಾಪಿಸಿದ 'ಗೋಖಲೆ ಟ್ರಸ್ಟ್'ಗೆ ದಾನವಾಗಿ ನೀಡಿದ್ದರು.

ಡಿ.ವಿ.ಜಿ ಅವರ ನಾಲ್ಕು ಸಾಲಿನ ಕಗ್ಗಗಳಲ್ಲಿ ಅಗಾಧವಾದ ಅರ್ಥಗಳು ಅಡಗಿವೆ.

"ಅಕ್ಕಿಯೊಳಗನ್ನವನು ಮೊದಲಾರು ಕಂಡವರು
ಅಕ್ಕರದ ಬರಹಕ್ಕೆ ಮೊದಲಿಗನದಾರು
ಲೆಕ್ಕವಿರಿಸಿಲ್ಲ ಜಗ ತನ್ನಾದಿ ಬಂಧುಗಳ
ದಕ್ಕುವುದೇ ಜಸ ನಿನಗೆ 'ಮಂಕುತಿಮ್ಮ'"

ಈ ಕಗ್ಗವನ್ನೇ ನೋಡು. ನಾವು ಆಲೋಚಿಸದ ವಿಷಯಗಳ ಕುರಿತು ಅವರು ಬೆಳಕು ಚೆಲ್ಲುತ್ತಾರೆ. ಅಕ್ಕಿಯನ್ನು ಬೇಯಿಸಿದರೆ ಅದು ಅನ್ನವಾಗಿ ಮಾರ್ಪಡುತ್ತದೆ ಎಂದು ಮೊದಲು ಯಾರು ಕಂಡು ಹಿಡಿದವರೆಂದು ಯಾರಿಗಾದರೂ ಗೊತ್ತಿದೆಯೋ?, ಅಥವಾ ನಾವು ಬರೆಯುವಂತಹ ನಮ್ಮ ಪ್ರೀತಿಯ ಅಕ್ಷರಗಳನ್ನು ಮೊದಲು ಬರೆದವನಾರು ಎಂದೇನಾದರೂ ಗೊತ್ತಿದೆಯೇ?, ಈ ಜಗತ್ತಿನಲ್ಲಿ ತನ್ನ ಬಂಧುಗಳು ಯಾರು ಎಷ್ಟು ಎಂಬುದನ್ನು ಲೆಕ್ಕವಿರಿಸಿದವರು ಎಷ್ಟು ಜನರಿದ್ದಾರೆ ಹೇಳು? ಕೆಲವರು ಹೆಸರು, ಕೀರ್ತಿಗಾಗಿ ಏನನ್ನೂ ಬೇಕಾದರೂ ಮಾಡಲು ಹಿಂಜರಿಯುವುದಿಲ್ಲ. ಅಂತಹವರಿಗೆ ಡಿ.ವಿ.ಜಿ ಅವರು ಸೂಚ್ಯ ವಾಗಿ ಬುದ್ಧಿವಾದವನ್ನು ಹೇಳುತ್ತಾರೆ. ಕೀರ್ತಿ ಎನ್ನುವುದು ನಿನಗೆ ಬೇಕೇ? ಅದು ದೊರೆಯುವುದೂ ಅಷ್ಟು ಸುಲಭವಲ್ಲ. ಅದಕ್ಕಾಗಿ ಸತತ ಪ್ರಯತ್ನ ಮಾಡಬೇಕು ಎಂಬ ತತ್ವ ಅಡಗಿರುವುದನ್ನು ಎಂದು ನಾವು ಅರ್ಥೈಸಿಕೊಳ್ಳಬಹುದು.

'ಮಂಕುತಿಮ್ಮನ ಕಗ್ಗ' ಎನ್ನುವುದು ಬಹಳ ವಿಸ್ತಾರವಾದ ವಿಷಯ. ಅದರ ಬಗ್ಗೆ ಹೇಳುವುದು, ಬರೆಯುವುದು ಎಂದರೆ ಅದು ದುಸ್ಸಾಹಸವೇ ಸರಿ. ಅವರು ಬರೆದ ಎಲ್ಲ ಕಗ್ಗಗಳೂ ಸುಲಭದಲ್ಲಿ ಅರ್ಥವಾಗುವುದಿಲ್ಲ. ಅದರಲ್ಲಿ ಅನೇಕ ಗೂಢಾರ್ಥಗಳೂ ಇವೆ. ಅದನ್ನು ಸರಿಯಾಗಿ ಓದಿ ಮನನ ಮಾಡಿಕೊಂಡಾಗ ಅರ್ಥೈಸಿಕೊಳ್ಳಬಹುದು. ಇಂದು ಕನ್ನಡ ಓದುವವರು, ಮಾತನಾಡುವವರು ಕಡಿಮೆಯಾಗುತ್ತಿದ್ದಾರೆ. ಕಗ್ಗದ ಮರ್ಮವನ್ನು ನಮ್ಮ ಮುಂದಿನ ಪೀಳಿಗೆಗೂ ಅರ್ಥೈಸುವಂತೆ ಮಾಡಬೇಕಾಗಿದೆ. ಕಗ್ಗವನ್ನು ಎಲ್ಲರೂ ಸುಲಭವಾಗಿ ತಿಳಿದುಕೊಳ್ಳುವಂತೆ ಮಾಡುವಲ್ಲಿ ಹಿರಿಯ ಸಾಹಿತಿಗಳು, ಕವಿಗಳು, ಮೇಧಾವಿಗಳು ಮಾಡಬೇಕಾಗಿದೆ. ನಾವು ಕರ್ನಾಟಕದವರು. ನಾವೇ ಕನ್ನಡ ಓದಲಿಲ್ಲಾಂದ್ರೆ, ಇಂಥ ಅಮೂಲ್ಯ ಕೃತಿಗಳನ್ನು ಓದುವವರಾರು? ನಮ್ಮಲ್ಲಿ ಇಂದು ಆಂಗ್ಲ ವ್ಯಾಮೋಹ ಹೆಚ್ಚುತ್ತಿದ್ದು ಕನ್ನಡ ಪರ ಕಾಳಜಿ ಕಡಿಮೆಯಾಗುತ್ತಿರುವುದು ಖೇದನೀಯ ಸಂಗತಿ ಅಲ್ಲವೇನೋ? ಕನ್ನಡವನ್ನು ಕಲಿಯದೇ ಇದ್ದರೆ ನಮ್ಮ ಕನ್ನಡ ಸಾಹಿತ್ಯದ ಅಮೂಲ್ಯ ಕೃತಿಗಳನ್ನು ಓದುವುದರಿಂದ ನಾವು ವಂಚಿತರಾದಂತೆಯೇ. ಮಂಕುತಿಮ್ಮನ ಕಗ್ಗವಂತೂ ಕನ್ನಡದ ಭಗವದ್ಗೀತೆ ಅಂತಾರೆ. ಇದು ಅರ್ಥೈಸಲು ಕಠಿಣ ಅನಿಸಿದರೆ ಶಿಕ್ಷಕರು ಮಕ್ಕಳಿಗೆ ಅದರ ಸಾರವನ್ನು ತಿಳಿಯಪಡಿಸಬೇಕು. ಆ ಮೂಲಕ ಅವರಲ್ಲಿ ಸಾಹಿತ್ಯಾಭಿರುಚಿಯನ್ನು ಮೂಡಿಸಬೇಕು. ಅಷ್ಟೇ ಅಲ್ಲ ನಾವು ಓದಿದ ಒಳ್ಳೆಯ ಪುಸ್ತಕದ ಬಗ್ಗೆ ಸ್ನೇಹಿತರ, ಕುಟುಂಬದವರ ಜೊತೆ ಚರ್ಚಿಸಬೇಕು. ಒಳ್ಳೊಳ್ಳೆಯ ಪುಸ್ತಕಗಳನ್ನು ಓದಿದಂತೆ ನಮ್ಮಲ್ಲಿ ಜ್ಞಾನಶಕ್ತಿ ಹೆಚ್ಚುತ್ತದೆ. ನಮ್ಮಲ್ಲಿ ಧನಾತ್ಮಕ ಅಂಶಗಳು ಹೆಚ್ಚಾಗುತ್ತದೆ.

ಇರಲಿ ಬಿಡು ಈಗ ನಾವು ಮತ್ತೆ ಕಗ್ಗದ ಕಡೆ ಬರೋಣ. ನಾನು ನಿನ್ನಲ್ಲಿ ಹೇಳಿದೆನಲ್ಲ ಮಂಕುತಿಮ್ಮನ ಕಗ್ಗ ಅದು ಆದಿ ಪ್ರಾಸದಲ್ಲಿ ಬರೆದಿರೋದು. ಸುಮಾರು 945 ಪದ್ಯಗಳು ಅಥವಾ ನಾವು ಕಗ್ಗ ಅಂತ ಏನು ಕರೆಯುತ್ತೇವೆಯೋ ಅದು ಇದರಲ್ಲಿ ಇದೆ. ಇದನ್ನು ಮುಕ್ತಕಗಳು, ಚೌಪದಿ ಅಂತಾನು ಅನ್ನುತ್ತಾರೆ. ಡಿ.ವಿ.ಜಿ ಅವರು ಒಂದು ಕಡೆ

ಕವಿಯಲ್ಲ, ವಿಜ್ಞಾನಿಯಲ್ಲ, ಬರಿ ತಾರಾಡಿ
ಅವನರಿವಿಗೆಟುಕುವೊಲೊಂದಾತ್ಮನಯವ
ಹವಣಿಸಿದನಿದನು ಪಾಮರಜನರ ಮಾತಿನಲಿ
ಕವನ ನೆನಪಿಗೆ ಸುಲಭ–ಮಂಕುತಿಮ್ಮ

"ನಾನು ಕವಿಯಲ್ಲ. ವಿಶೇಷವಾದ ಜ್ಞಾನವುಳ್ಳವನಲ್ಲ. ಈ ಕಗ್ಗವನ್ನು ನಾನು ಸಾಮಾನ್ಯ ಜನರಿಗಾಗಿ ಬರೆದಿರುವೆನು. ಇದರಲ್ಲಿ ಜೀವನ ಸತ್ಯ, ಸತತ ಓದು ಹಾಗೂ ಅನುಭವದ ಸಾರವಿದೆ" ಎಂದು ಹೇಳಿಕೊಂಡಿದ್ದಾರೆ. ಈ ರೀತಿ ನಾಲ್ಕು ಸಾಲುಗಳಲ್ಲಿ ಬರೆದುದು ಓದಿ ನೆನಪಿಡುವುದು ಕೂಡಾ ಸುಲಭ ಎಂದು ತಾನು ಆರಿಸಿಕೊಂಡ ಕಗ್ಗದ ಶೈಲಿಯ ಬಗ್ಗೆಯೂ ಹೇಳಿದ್ದಾರೆ.

ನೋಡು ಈ ನಾಲ್ಕೇ ಸಾಲಿನ ಕಗ್ಗದಲ್ಲಿ ಬಹಳ ಅರ್ಥವ್ಯಾಪ್ತಿ ಅಡಗಿದೆ. ನಾವು ಮತ್ತೆ ಮತ್ತೆ ಓದಿದಾಗ ಹೊಸ ಹೊಸ ಅರ್ಥಗಳು ಹೊಳೆಯುತ್ತದೆ. ಅಥವಾ ಬೇರೆ ಬೇರೆ ಓದುಗರು ಅದನ್ನು ಭಿನ್ನವಾಗಿ ಅರ್ಥೈಸಿಕೊಳ್ಳಬಹುದು. ನಮ್ಮ ಅನುಭವ, ಚಿಂತನೆಯನ್ನೇ ಈ ಕಗ್ಗಗಳು ಬಿಂಬಿಸುತ್ತವೆ. ಈ ಕಗ್ಗವನ್ನೇ ನೋಡು

"ಗಿಡದಿ ನಗುತ್ತಿರುವ ಹೂವು ಪ್ರಕೃತಿಸಖನಿಗೆ ಚಂದ
ಮಡದಿ ಮುಡಿದಿರುವ ಹೂವು ಯುವಕಂಗೆ ಚಂದ
ಗುಡಿಯೊಳಗೆ ಕೊಡುವ ಹೂವು ದೈವಭಕ್ತಗೆ ಚಂದ
ಬಿಡಿಗಾಸು ಹೂವಳಿಗೆ –ಮಂಕುತಿಮ್ಮ"

ಇಲ್ಲಿ ಪ್ರತಿಮೆ ಕೇವಲ ಒಂದು ಹೂವು. ಅದೇ ಹೂವು ಒಂದೊಂದು ಕಡೆಯಲ್ಲಿ ಒಬ್ಬೊಬ್ಬರಿಗೆ ಚಂದ. ಪ್ರಕೃತಿಪ್ರಿಯರಿಗೆ ಅದು ಗಿಡದಲ್ಲಿ ಚಂದ ಕಂಡರೆ, ಯುವಕ ಅದನ್ನು ತನ್ನ ಮಡದಿಯ ಮುಡಿಯಲ್ಲಿ ಕಂಡು ಆ ಸಂತೋಷವನ್ನು ಕಾಣುತ್ತಾನೆ. ದೇವರ ಅರ್ಚನೆಯ ನಂತರ ಆ ದೇವರ ಮುಡಿಯಲ್ಲಿನ ಹೂವನ್ನು ದೈವಭಕ್ತರು ಭಕ್ತಿ ಶ್ರದ್ಧೆಯಿಂದ ಕಾಣುತ್ತಾರೆ. ಆದರೆ ಆ ಹೂವನ್ನು ಮಾರುವ ಹೂವಾಡಗಿತ್ತಿಗೆ ಅದರಿಂದ ಬರುವ ಬಿಡಿಗಾಸು ಮಾತ್ರ ಮುಖ್ಯವಾಗಿರುತ್ತದೆ. ಅದು ಆಕೆಯ ಜೀವನ ನಿರ್ವಹಣೆಯ ಮಾರ್ಗವಾಗಿರುತ್ತದೆ.ಇಂತಹ ತುಂಬ ಅರ್ಥ ಕೊಡುವ ನಾಲ್ಕೇ ಸಾಲಿನ ಕಗ್ಗಗಳು ಪ್ರತಿಯೊಬ್ಬರ ಪ್ರೀತಿಯನ್ನು ಗಳಿಸಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ನೀನು ನಿನ್ನ ಜೀವನದ ಜಂಜಾಟದಲ್ಲಿ ಅದನ್ನು ಮರೆತಿರಬಹುದು. ಆದರೆ ಅದರಲ್ಲಿನ ತತ್ವಗಳನ್ನು ನೀನು, ನಾನು, ಪ್ರತಿಯೊಬ್ಬರೂ ಅನುಭವಿಸುತ್ತಾರೆ. ನಾನು ಹೇಳಿದ ಈ ಎಲ್ಲಾ ವಿಷಯಗಳಲ್ಲಿ ತಪ್ಪು ಕಂಡರೆ ಕ್ಷಮೆ ಇರಲಿ. ಆ ತಪ್ಪುಗಳನ್ನು ಮತ್ತೆ ಮತ್ತೆ ಸರಿಪಡಿಸುವ ಭಾಗ್ಯ ದೊರೆಯಲಿ. ಕನ್ನಡ ಸಾಹಿತ್ಯದ ಇಂತಹ ಅಮೂಲ್ಯ ಕೃತಿಗಳನ್ನು, ಕೃತಿಕಾರರನ್ನು ಸದೈವ ನೆನೆಯುವುದು ನಮ್ಮ ಕರ್ತವ್ಯ. ಒಬ್ಬ ಮಹಾನ್ ತತ್ವಜ್ಞಾನಿ, ಪತ್ರಕರ್ತ, ಸಾಹಿತಿ, ಸಮಾಜಸೇವಕರಾಗಿದ್ದ ಡಿ.ವಿ.ಜಿ ಅವರು 1975ರ ಅಕ್ಟೋಬರ್ 7ರಂದು ಇಹಲೋಕ ತ್ಯಜಿಸಿದರು.

ನನಗೆ ಏನಾದರೂ ಬೇಸರ ಆದರೆ ನಾನು ಈ ಕಗ್ಗಗಳನ್ನು ನೆನಪಿಸಿಕೊಳ್ಳುತ್ತೇನೆ. ಮನಸ್ಸಿಗೆ ನೋವಾದಾಗ ಕಗ್ಗಗಳನ್ನು ಮೆಲುಕು ಹಾಕುತ್ತಾ ಅದರಲ್ಲಿ ಅಡಗಿರುವ ತತ್ವವನ್ನು ಜೀವನದಲ್ಲಿ ಅಳವಡಿಸುವ ಪ್ರಯತ್ನ ಮಾಡುತ್ತೇನೆ. ಹಾಗೆ ಇಂದು ನಿನ್ನಲ್ಲಿ ಈ ಎಲ್ಲಾ ವಿಷಯಗಳನ್ನು ಹೇಳಿಕೊಂಡೆ ಕಣೋ. ಸಮಯದ ಅರಿವೇ ಆಗಲಿಲ್ಲ. ನಡಿ, ನಮ್ಮ ಕೆಲಸದ ಸಮಯವಾಯಿತು. ನನಗೆ ಸಮಯ ಸಿಕ್ಕಾಗ ಓದುತ್ತೇನೆ. ನೀನು ಕೂಡಾ ಓದು. ಕನ್ನಡವನ್ನು, ಕನ್ನಡದ ಮಹಾನ್ ಸಾಹಿತಿಗಳನ್ನು ಮರೆಯದೇ ನೆನಪಿಸಬೇಕಾದುದು ನಮ್ಮ ಕರ್ತವ್ಯ.

ಸಿರಿಗನ್ನಡಂ ಗೆಲ್ಗೆ.

# "ಹಿಂದಿನ ನೆನಪುಗಳು"






ಅಸೋಸಿಯೇಷನ್ನಿನ ಸಹಾಯಾರ್ಥವಾಗಿ ಶ್ರೀಮತಿ ವೈಜಯಂತಿ ಮಾಲಾರವರು ನೃತ್ಯ ಪ್ರದರ್ಶನವನ್ನು ಇತ್ತಾಗ
ಸ್ಥಳ: ಷಣ್ಮುಖಾನಂದ ಸಭಾಗಾರ ವರ್ಷ 1973

ಚಿತ್ರದಲ್ಲಿ: ಶ್ರೀ ಸುಧೀರ್ ಜೋಷಿ, ಮೇಯರ್, ಅಧ್ಯಕ್ಷರು:ಶ್ರೀ. ಕೆ.ಎಸ್. ರಾಮರಾವ್,

ಉಪಾಧ್ಯಕ್ಷರು: ಶ್ರೀ ಜಿ.ವಿ.ರಾವ್, ಕಾರ್ಯದರ್ಶಿ: ಶ್ರೀ.ವೈ.ಜಿ.ನಾಗರಾಜ್, ಶ್ರೀ ಚಂಪಕನಾಥ್, ಶ್ರೀ ವಿಠ್ಠಲ್

ಕೃಪೆ: ಶ್ರೀ. ಜಿ.ವಾಸುದೇವರಾವ್

## NIPPATTU



Ingredients:
Baarili Rava – 3 cups
Maida – ½ cup
Rice Atta – ½ cup
Green Chillies + curry leaves finely cut – 12-14
Coriander leaves finely cut
Finely chopped Onion – 3-4
Sour curds -2 big spoons
Salt to taste
2-3 big sppons of ghee

Mix all the abov ingredients and grease a soft plastic sheet, (milk cover0 Make soft balls and flatte them with fingers and deep fry till golden brown. Nice snack for winter.

## BADAM KALAKANTH



Ingredients
Milk -2 liters
Sugar – 2 small c ups
Badam powder - ½ cup
Mawa – 100 gms
Alum a pinch

Reduce milk in thick bottom kadai till the quantity becomes ½ liter. Add alum (pinch) then, as the milk curdles and sugar and after 10-15 mints add mawa and badam powder and cook on lower flame till the mixture leave the sides.
Pour the mixture to a greased tray and the level the surface. Once cooled make pieces desired.

**- Raji Gopalkrishna**

## ಜಯ ಸುವರ್ಣರಿಗೆ ರಾಜ್ಯೋತ್ಸವ ಪ್ರಶಸ್ತಿ





ಈ ಬಾರಿಯ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರರಾದ ಹಿರಿಯ ಸಂಘಟಕ, ಸಮಾಜಸೇವಕ, ಸಾಂಸ್ಕೃತಿಕ ನೇತಾರ ಜಯ ಸಿ . ಸುವರ್ಣ ಅವರನ್ನು ಮೈಸೂರು ಅಸೋಸಿಯೇಷನ್ ಹಾರ್ದಿಕವಾಗಿ ಅಭಿನಂಧಿಸಿದೆ.

ಜಯ ಸುವರ್ಣ ಅವರ ಸಾಧನೆ ನಾಡಿಗೆ ಮಾದರಿಯಾಗಿದೆ. ಬಿಲ್ಲವರ ಅಸೋಸಿಯೇಶನ್ ಹಾಗೂ ಭಾರತ್ ಬ್ಯಾಂಕಿಗೆ ಕಾಯಕಲ್ಪ ನೀಡಿದ ಅವರು ಸಮಷ್ಟಿಯ ಹಿತಕ್ಕೆ ಶ್ರಮಿಸುತ್ತಾ ಬಂದಿರುವುದು ಅಭಿಮಾನ ಪಡುವ ಸಂಗತಿ. ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ರಂಗಗಳಲ್ಲಿ ಬಹು ಆಸ್ಥೆಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

## ಸಿಲ್ಕ್ ಸೀರೆಯ ಪ್ರದರ್ಶನ




ವತಿಯಿಂದ ಈ ಕಾರ್ಯಕ್ರಮಕ್ಕೆ ಪ್ರಾಯೋಜನವಿತ್ತು. ಕನ್ನಡದ ಹೆಸರಾಂತ ನಟಿ ನಿಕೇಶಾ ಪಟೇಲ್ ಅವರು ಗೌರವ ಅತಿಥಿಗಳಾಗಿ ಆಗಮಿಸಿದ್ದರು. ಇನ್ನೊಬ್ಬ ಕನ್ನಡದ ನಟಿ ಕಾವ್ಯ ಶಾ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಮೈಸೂರು ಅಸೋಸಿಯೇಷನ್ನಿನ ಅಧ್ಯಕ್ಷೆ ಕೆ.ಕಮಲಾ ಮುಖ್ಯ ಅತಿಥಿಗಳಾಗಿಯೂ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಮಂಜುನಾಥ್ ಅವರು ವಿಶೇಶ ಅತಿಥಿಗಳಾಗಿಯೂ ಉಪಸ್ಥಿತರಿದ್ದರು. KSICಯ MD ಶ್ರೀಮತಿ ಲೀಲಾ ಮಂಜುನಾಥ್ ಮತ್ತು Marketing Head ಫಿಲೋಮಿನ್ ರಾಜು ಸಹ ಉಪಸ್ಥಿತರಿದ್ದರು.

## ನೀನೇನಾ....

ಹಿಂದೊಂದು ಜನುಮದಲ್ಲಿ
ನಾ ಕಂಡ ಕನಸಿನಲ್ಲಿ
ಅಮ್ಮನಾಗಿ ಬಂದವಳು
ಸಾಹಿತ್ಯ ಹೆಸರಿಟ್ಟವಳು ನೀನೇನಾ?. . .

ಪುಟ್ಟ ಪುಟ್ಟ ಹೆಜ್ಜೆಯಲ್ಲಿ
ಸೆರಗ ಹಿಡಿದು ನಡೆದಾಗ
ಅಂಬೆಗಾಲು ಎಡವಿದಾಗ
ಬಾಚಿ ಹಿಡಿದೋಳು ನೀನೇನಾ? . . .

ಎಲ್ಲಿ ಹೋದರಲ್ಲಿ ನೀನು
ಬಾ ಎನುವೆ ಒಲವಿಂದ ಕರೆವೆ
ನೆನಕೆಯ ಆಕಳಿಕೆ
ಬರಿಸುವವಳು ನೀನೇನಾ. . . .

ಅಂದು ನಾ ಸೋತು ನಿಂತಾಗ
ಸಾಂತ್ವನದ ಸ್ವರ ನುಡಿಸಿ
ಆದರಿಸಿ ಸಂತೈಸಿ, ನೋವನು
ಮರೆಸಿದವಳು ನೀನೇನಾ?. . . .

ಕಣ್ಣು ತೆರೆದರೆ
ಎರಡೆರಡು ಬಿಂಬ
ಒಂದು ಹೆತ್ತಮ್ಮ
ಮತ್ತೊಂದು ನೀನಮ್ಮಾ....



- ಅನಿತಾ ಪಿ ಪೂಜಾರಿ ತಾಕೊಡೆ

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.

# ಮೈಸೂರು ಅಸೋಸಿಯೇಷನ್, ಮುಂಬಯಿ

ಹರಡುತ್ತಿದೆ

## "ಕನ್ನಡ ಸೌರಭ"

### ಅರ್ಪಣೆ 'ಸ್ನೇಹರಂಗ' ಬೆಂಗಳೂರು

ವಿನ್ಯಾಸ : ಶ್ರೀ ಶ್ರೀನಿವಾಸ್ ಜಿ. ಕಪ್ಪಣ್ಣ          ನಿರ್ವಹಣೆ : ಶ್ರೀ ಟಿ. ರಘು

**ನವೆಂಬರ್ 21, 22 ಮತ್ತು 23, 2014 ರಂದು**

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ, 393, ಭಾಹು ದಾಜಿ ರಸ್ತೆ ಮಾಟುಂಗಾ (ಪೂರ್ವ), ಮುಂಬೈ – 400 019.

**ಶುಕ್ರವಾರ, 21 ನವೆಂಬರ್ 2014.** ಸಂಜೆ 6.30

**"ಅಸೋಸಿಯೇಷನ್‌ನಲ್ಲಿ ಸಿನಿಮಾ ತಾರೆಯರು"**

ಶ್ರೀ ಗಿರೀಶ್ ಆರಾಧ್ಯ ಅವರಿಂದ

ಮಂಗನೊಂದಿಗೆ ಮಿಮಿಕ್ರಿ

ಸಂಜೆ 7.30

**"ಹಾಸ್ಯ ಸಂಜೆ"**

'ಸಾಹಿತಿಗಳ ಜೀವನದಲ್ಲಿ ಹಾಸ್ಯ'

ಶ್ರೀ ಎಂ. ಎಸ್. ನರಸಿಂಹಮೂರ್ತಿ ಅವರಿಂದ

**ಶನಿವಾರ, 22 ನವೆಂಬರ್ 2014.** ಸಂಜೆ 5.00

'ಸಾತ್ವಿಕ' ತಂಡ, ಬೆಂಗಳೂರು, ಅವರಿಂದ

ಜಾನಪದ, ಸುಗಮ ಹಾಗೂ ರಂಗಗೀತೆಗಳ

**"ಸಂಗೀತ ಸಂಜೆ"**

ಪ್ರಸ್ತುತಿ : ಶ್ರೀ ರಾಜಗುರು ಹೊಸಕೋಟೆ

**ಶನಿವಾರ, 22 ನವೆಂಬರ್ 2014.** ಸಂಜೆ 7.00

'ಸ್ನೇಹರಂಗ' ತಂಡ, ಬೆಂಗಳೂರು, ಅವರಿಂದ ನಾಟಕ

**"ಹೀಗೊಂದು ಜನಪದ ಪ್ರಸಂಗ"**

ರಚನೆ : ಶ್ರೀ ಚಂದ್ರಶೇಖರ್     ನಿರ್ದೇಶನ : ಶ್ರೀಮತಿ ಸುಂದರಶ್ರೀ

ಸಂಗೀತ : ಶ್ರೀ ಗಜಾನನ ನಾಯ್ಕ

ನಿರ್ವಹಣೆ : ಶ್ರೀ ರಾಜಗುರು ಹೊಸಕೋಟೆ

**ಭಾನುವಾರ, 23 ನವೆಂಬರ್ 2014.** ಸಂಜೆ 6.30

'ಸ್ನೇಹರಂಗ' ತಂಡ, ಬೆಂಗಳೂರು, ಅವರಿಂದ ನಾಟಕ

**"ತುಕ್ಕೋಜಿ"**

ಮೂಲ : ಶ್ರೀ ಪೂರ್ಣಚಂದ್ರ ತೇಜಸ್ವಿ,
ರಂಗರಚನೆ : ಶ್ರೀ ರಮೇಶಚಂದ್ರ (ರಂಗ ಸಂಪದ)
ನಿರ್ದೇಶನ : ಶ್ರೀ ವಾಲ್ಟರ್ ಡಿಸೋಜ
ನಿರ್ವಹಣೆ : ಶ್ರೀ ಟಿ. ರಘು

ಸಹಕಾರ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

**ಎಲ್ಲಾ ಕನ್ನಡ ಅಭಿಮಾನಿಗಳಿಗೂ ಆದರದ ಸ್ವಾಗತ**

ಕೆ. ಕಮಲಾ
*ಅಧ್ಯಕ್ಷರು*

ವೈ. ಡಿ. ವೆಂಕಟೇಶ್
*ಕಾರ್ಯದರ್ಶಿ*

ಮೈಸೂರು ಅಸೋಸಿಯೇಷನ್, ಮುಂಬೈ

# ಮೈಸೂರು ಅಸೋಸಿಯೇಶನ್, ಮುಂಬೈ

ಮತ್ತು

## ಶ್ರೀ ರಂಜನಿ ಸಂಗೀತ ಸಭಾ (ರಿ), ಡೊಂಬಿವಲಿ ಪೂರ್ವ

**ಶ್ರೀಮತಿ ವೀಣಾ ನಾಗರಾಜರ ಅವರ ದಿವ್ಯ ಮಂಗಳ ಕೃತಿಗಳು (ಪುಸ್ತಕ) ಹಾಗೂ ಲಾಸ್ಯ ಲಹರಿ ಅಡಕ ಮುದ್ರಿಕೆ (CD)**

**ಇವುಗಳ ಲೋಕಾರ್ಪಣೆ ಕಾರ್ಯಕ್ರಮ ಮತ್ತು ಸನ್ಮಾನ ಸಮಾರಂಭ**

**ದಿನಾಂಕ : ಶನಿವಾರ 29.11.2014 ಸಾಯಂ. ಗಂಟೆ 6.00**

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ, 393, ಭಾಹು ದಾಜಿ ರಸ್ತೆ ಮಾಟುಂಗಾ (ಪೂರ್ವ), ಮುಂಬೈ – 400 019.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938